


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 296 Monday 05-08-2024 E-mail : maruti.b.hosamani76@gmail.com Page: 4 Price : Rs. 1/-


## ಶ್ರಾವಣ ಬಂತು ಹರುಷ ತಂತು



ಶ್ರಾವಣ ಬಂತು ಹರುಷ ತಂತು
ವರ್ಷಾ ಧಾರೆ ಆಗ ಈಗ
ಹೊಸ ಹಬ್ಬ ಮನವು ಹುರುಪು
ಶ್ರಾವಣ ಶಿವನ ಪ್ರಿಯ ಮಾಸ
ಶ್ರಾವಣ ಮಾಸ ಮಂಗಳ ಶುಭಕರ
ಮಂಗಳಗೌರಿ ವ್ರತ ಸೌಭಾಗ್ಯದ ವರ
ಶ್ರಾವಣ ಶುಕ್ರವಾರ ಅಷ್ಟಲಕ್ಷ್ಮೀ ಸಿರಿ
ಶ್ರಾವಣ ಸೋಮ ಶಿವನ ವರ
ಅರ್ಧನಾರೀಶ್ವರ ಭಕ್ತರ ಜಪ
ಉಪವಾಸ ಪಾವನ ಯೋಗ
ಆಧ್ಯಾತ್ಮಿಕ ಪ್ರವಚನ ಸ್ವರ್ಗ ಸುಖ
ಶ್ರಾವಣ ಮಂಗಳ ಆನಂದ ಚೇತನ
ಶ್ರಾವಣ ಮಾಸ ಮಳೆ ಹನಿ
ಸರ್ವ ಮನ ಇಂಪು ಕಂಪು
ನಾಗ ಪೂಜೆ ಅಣ್ಣ ತಂಗಿ
ಗಟ್ಟಿತನ ಸುರಕ್ಷತೆ ದಾರ ದೈರ್ಯ
ಸುಂದರ ಮೆರುಗು ಅಳ್ಳು ಲಡ್ಡು
ಸವಿ ಹಂಚಿ ನೆರೆ ಹೊರೆ
ಸಂತಸ ಕ್ಷಣ ಮನ ಉಯ್ಯಾಲೆ
ಉತ್ಸಾಹ ತೇಲುವ ಶ್ರಾವಣ ಮಾಸ
ಹರಿಹರ ಸ್ಮರಣೆ ಅಮೃತ ಘಳಿಗೆ
ಶುಭ ತರುವದು ಶ್ರಾವಣ ಮಾಸ
ದೇಶಂಸು.



– ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ
ಆರೋಗ್ಯ ನಿರೀಕ್ಷಣಾಧಿಕಾರಿ
"ವಿಶ್ವ ಆರೋಗ್ಯ ಸಂಜೀವಿನಿ"
ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು
ಬಾಗಲಕೋಟೆ

## ಸಾಂಸ್ಕೃತಿಕ ಮತ್ತು ಶಾರೀರಿಕ ಚಟುವಟಿಕೆಗಳ ಉದ್ಘಾಟನಾ ಹಾಗೂ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಕಾರ್ಯಕ್ರಮ



**ಕಲಕೇರಿ :** ತಾಳಿಕೋಟಿ ತಾಲೂಕಿನ ಕಲಕೇರಿ ಗ್ರಾಮದಲ್ಲಿ 6–8–2024. ಮಂಗಳವಾರ ದಂದು ಸಾಂಸ್ಕೃತಿಕ ಮತ್ತ ಶಾರೀರಿಕ ಚಟುವಟಿಕೆಗಳ ಉದ್ಘಾಟನಾ ಹಾಗೂ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಮಂಗಳವಾರ ಬೆಳಗ್ಗೆ.10 ಗಂಟೆಗೆ ನಡೆಯುವುದು. ಕಲಕೇರಿ ಗ್ರಾಮದ ಮಲ್ಲಿಕಾರ್ಜುನ್ ವಿದ್ಯಾ ವರ್ಧಕ ಸಂಘದ ಅಡಿಯಲ್ಲಿ ನಡೆಯುತ್ತಿರುವ ಅನಾದಾನಿತ ಶ್ರೀ ಬಸವೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ 6–8–2024. ಮಂಗಳವಾರ ಬೆಳಗ್ಗೆ 10 ಗಂಟೆಯಿಂದ 2024/25ನೇ ಸಾಲಿನ ಸಾಂಸ್ಕೃತಿಕ ಮತ್ತು ಶಾರೀರಿಕ ಚಟುವಟಿಕೆಗಳ ಉದ್ಘಾಟನಾ ಹಾಗೂ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ನಡೆಯುವುದು. ಕಾರ್ಯಕ್ರಮದ ಸಾನಿಧ್ಯವನ್ನು ಕಲಕೇರಿ ಗುರು ಮರುಳಾರಾಧ್ಯ ಸಂಸ್ಥಾನ ಹಿರೇಮಠ ಸಿದ್ಧರಾಮ ಶಿವಾಚಾರ್ಯರು. ವಹಿಸಲಿದ್ದು ಗೌರವ ಅಧ್ಯಕ್ಷರಾಗಿ ಸಂಸ್ಥೆಯ ಕಾರ್ಯದರ್ಶಿ ಮಲ್ಲಿಕಾರ್ಜುನ್ ಜೋಗುರ್, ಸಂಸ್ಥೆಯ ಅಧ್ಯಕ್ಷ ಶಾಂತಗೌಡ ಪಾಟೀಲ್, ವಹಿಸುವರು ಉದ್ಘಾಟಕರಾಗಿ ಷಣ್ಮುಕಪ್ಪ ಝಳಕಿ, ಮಲಕಾಜಪ್ಪಗೌಡ ಬಿರಾದಾರ ಭಾಗವಹಿಸುವರು. ಪ್ರಾಚಾರ್ಯ ಸಿ.ಎಸ್. ಹಿರೇಮಠ್, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು ಮುಖ್ಯ ಅತಿಥಿಗಳು ಸಿಂದ–ಗಿಯ ಎಚ್. ಜಿ. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ. ಎ .ಆರ್. ಹೆಗ್ಗಣದಬಡ್ಡಿ, ಕಲಕೇರಿ ಪಿಎಸ್ಐ ಸುರೇಶ್ ಮಂಟೂರ ಭಾಗಿಯಾಗುವರು. ಈ ಸಂದರ್ಭದಲ್ಲಿ ಕಾಲೇಜಿನ ಮಕ್ಕಳಿಂದ ಸಾಂಸ್ಕೃತಿಕ ಮನರಂಜನೆ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ. ತಾಳಿಕೋಟೆ.**

## ಬಾಂಡ್ರಾವಿ ಗ್ರಾಮದಲ್ಲಿ 78, ಲಕ್ಷದ ಉಪ ಆರೋಗ್ಯ ಕೇಂದ್ರ ಉದ್ಘಾಟನೆ ಮಾಡಿದ ಶಾಸಕರು



**ರಾಂಪುರ :** ಮೊಳಕಾಲ್ಮೂರು ಕ್ಷೇತ್ರದ ಎನ್ ವೈ ಗೋಪಾಲಕೃಷ್ಣ ಶಾಸಕರು ರಾಂಪುರದ ಗಡಿ ಭಾಗದಲ್ಲಿ ಸುತ್ತಮುತ್ತ ಬರುವಂತ ಬಾಂಡ್ ರವಿ ಗ್ರಾಮಗಳಿಗೆ ಆರೋಗ್ಯ ಉಪ ಕೇಂದ್ರ 78 ಲಕ್ಷ ವೆಚ್ಚದಲ್ಲಿ ಅನುದಾನ ಬಿಡುಗಡೆ ಮಾಡಿಸಿ ಉದ್ಘಾಟನೆ ಮಾಡಿದ ಶಾಸಕರು ಈ ಸಂದರ್ಭದಲ್ಲಿ ಶಾಸಕರ ಸಭೆಯಲ್ಲಿ ಮಾತನಾಡಿ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಕ್ವಾಟ್ರಸ್ ಮತ್ತು ಇನ್ನಿತರ ಫರ್ನಿಚರ್ಸ್‌ಗಳು ಇಲ್ಲಿ ಸೌಲಭ್ಯ ದೊರಕಲಿದ್ದು ಆರೋಗ್ಯ ಅಧಿಕಾರಿಗಳು ಇಲ್ಲಿ ಇರುವುದರಿಂದ ನಾಗರಿಕರಿಗೆ ಅನುಕೂಲವಾಗಲಿ ಎಂದು ತಾಲೂಕಿನ ಗ್ರಾಮಗಳಲ್ಲಿ ಶಿಕ್ಷಣಕ್ಕೆ ಮತ್ತು ಆರೋಗ್ಯಕ್ಕೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಏಕೆಂದರೆ ಒಬ್ಬ ಮಗು ಶಿಕ್ಷಣದಿಂದಲೇ ಮುಂದುವರೆಯ ಬೇಕು ಮತ್ತು ಆರೋಗ್ಯದ ಬಗ್ಗೆ ಜಾಸ್ತಿ ಗಮನ ಹರಿಸುತ್ತೇನೆ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿ ಸ್ವಚ್ಛತೆ ಮತ್ತು ಡೆಂಗ್ಯೂ ಕಾಲಾರಾ ಯಾವುದೇ ರೋಗಗಳು ಬರದಂತೆ ನೋಡಿ ಕೊಳ್ಳಲು ವೈದ್ಯಾಧಿಕಾರಿಗಳಿಗೆ ಸೂಚನೆ ನೀಡುತ್ತೇನೆ. ಎಂದು ಶಾಸಕರು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರುಗಳು ಇಸ್ಮಾಯಿಲ್ ಬಾಂಡ್ರಾವಿ ರಾಮಪ್ಪ ಮುಖಂಡರುಗಳು ಭಾಗವಹಿಸಿದ್ದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ತಿಪ್ಪೇಸ್ವಾಮಿ ಹೊಂಬಾಳೆ ಮೊಳಕಾಲ್ಮುರು.**

## ಯಾದಗಿರಿ ಶಾಸಕ ಚನ್ನರೆಡ್ಡಿ ಪಾಟೀಲ್ ಮತ್ತು ಅವರ ಮಗನನ್ನು ಕೂಡಲೇ ಬಂಧಿಸಲು ಆಗ್ರಹ



**ಬಳ್ಳಾರಿ :** ಯಾದಗಿರಿ ಪಿಎಸ್ಐ ಪರುಶುರಾಮ ಸಾವನ್ನಪ್ಪಿದ ಆರೋಪಿತರಾದ ಯಾದಗಿರಿ ಶಾಸಕ ಮತ್ತು ಅವರ ಮಗನನ್ನು ಶೀಘ್ರವಾಗಿ ಬಂಧಿಸಬೇಕು ಹಾಗು ಅವರ ಕುಟುಂಬಕ್ಕೆ ಜೀವ ರಕ್ಷಣೆ ನೀಡಬೇಕು.ಎಂದು
ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿ ಬಳ್ಳಾರಿ ವತಿಯಿಂದ ಪತ್ರಿಕಾ ಪ್ರಕಟಣೆಯ ಮೂಲಕ ರಾಜ್ಯದ ರಾಜ್ಯಪಾಲರಿಗೆ ಮನವಿ ಮಾಡಿ
ಯಾದಗಿರಿ ಶಾಸಕ ಚೆನ್ನರೆಡ್ಡಿ ಪಾಟೀಲ್ ತುನ್ನುರು ಮತ್ತು ಇವರ ಮಗನಾದ ಪಂಪನಗೌಡ ಸನ್ನಿಗೌಡ ತುನ್ನುರು ಇವರು ಯಾದಗಿರಿ ನಗರದ ಪಿ.ಎಸ್.ಐ. ಪರುಶುರಾಮ ಇವರನ್ನು ವರ್ಗಾವಣೆ ಮಾಡುವ ವಿಷಯಕ್ಕೆ ಹಣದ ಬೇಡಿಕೆಯನ್ನುಟ್ಟು ಮಾತಿನಂತೆ ಹಣ ಕೊಡಬೇಕು ಇಲ್ಲವಾದರೆ ನಿನ್ನನ್ನು ಬೇರೆಕಡೆ ವರ್ಗಾವಣೆ ಮಾಡಿಸುತ್ತೇನೆ ಎಂದು ಪಿ.ಎಸ್.ಐ. ಪರುಶುರಾಮ ಇವರಿಗೆ ಶಾಸಕನ ಮಗನು ಹೇಳಿದ್ದು ಮೃತ ಪಿಎಸ್ಐ ಪತ್ನಿ ಆರೋಪಿಸಿದ್ದಾರೆ ಶಾಸಕರ ಮಗನು ಹೇಳಿದ ಪ್ರಕಾರ ಮುಕ್ಕಾಲು ಹಣವನ್ನು ಶಾಸಕನ ಮಗನ ಕೈಗೆ ಪಿ.ಎಸ್.ಐ.ಪರುಶುರಾಮ ಸಾಲ ಮಾಡಿ ಮುಟ್ಟಿಸಿರುತ್ತಾನೆ. ಇನ್ನೂಳಿದ ಹಣವನ್ನು ಕೂಡಲೇ ಬೇಕೆಂದು ಪರಶುರಾಮರವರಿಗೆ ಒತ್ತಡ ಮತ್ತು ಬೆದರಿಕೆ ಹಾಕಿದ್ದಾನೆ.ಶಾಸಕನ ಮಗನು ಬೆದರಿಕೆ ಹಾಕಿದ ವಿಷಯವನ್ನು ಚಿಂತಿಸಿ ಪಿ.ಎಸ್.ಐ. ಪರುಶುರಾಮ ಹಣವನ್ನು ತಯಾರು ಮಾಡಿಕೊಂಡು ಮುಟ್ಟಿಸಲಿಕ್ಕೆ ಸಮಯ ನೀಡದೆ ಇರುವ ಸಂದರ್ಭದಲ್ಲಿ ಶಾಸಕನ ಮಗನ ಒತ್ತಡಕ್ಕೆ ಪಿ.ಎಸ್.ಐ. ರವರು ಹೆದರಿ ಸಾವನ್ನಪ್ಪಿದ್ದಾರೆ. ಎಂದು ಮೃತ ಪಿಎಸ್ಐ ಪತ್ನಿ ಹೇಳಿದ್ದಾರೆ
ಸಾವನ್ನಪ್ಪಿದ ಪಿ.ಎಸ್.ಐ. ಪರುಶುರಾಮ ಕುಟುಂಬಕ್ಕೆ ಶಾಸಕರ ಮತ್ತು ಆತನ ಬೆಂಬಲಿಗರ ಒತ್ತಡ, ಜೀವಬೆದರಿಕೆ ಮತ್ತು ಕುಟುಂಬದ ಮೇಲೆ ದಮಕಿ ಕೊಡಲು ಮುಂದಾಗಿದ್ದಾರೆ ಇವರನ್ನು ಪತ್ತೆ ಹಚ್ಚಲು ಮತ್ತು ಜೀವ ರಕ್ಷಣೆಗಾಗಿ ಪೋಲೀಸ್ ಬಂದೋಬಸ್ತ್ ಒದಗಿಸಬೇಕು ನೊಂದ ಕುಟುಂಬಕ್ಕೆ ಆರ್ಥಿಕ ಸಹಾಯಧನ 1 ಕೋಟಿ ನೀಡಬೇಕು, ಜೀವ ತೆಗೆದ ಶಾಸಕ ಚನ್ನರೆಡ್ಡಿ ಮತ್ತು ಆತನ ಮಗನನ್ನು ಕೂಡಲೇ ಬಂದಿಸಬೇಕೆಂದು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಬಳ್ಳಾರಿ ಘಟಕದ ಪ್ರಧಾನ ಕಾರ್ಯದರ್ಶಿ ಕೆ ಶಂಕರ್ ನಂದಿಹಾಳ ಆಗ್ರಹಿಸಿದ್ದಾರೆ.

## ಪತ್ರಕರ್ತರು ಸಮಾಜದ ಅಂಕು ಡೊಂಕುಗಳ ತಿದ್ದುವ ಕೆಲಸ ಮಾಡಬೇಕು: ಬಿ.ಹೆಚ್‌ಎಸ್. ರಾಜು



**ಹೊಸಪೇಟೆ : (ವಿಜಯನಗರ)** : ನಗರದ ಚರ್ಚ್ ಕಾಂಪ್ಲೆಕ್ಸ್ ನಲ್ಲಿರುವ ಕರ್ನಾಟಕ ಪತ್ರ ಕರ್ತರ ಸಂಘದ ಕಛೇರಿಯಲ್ಲಿ ಪತ್ರಿಕಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.
ಈ ಸಂಧರ್ಭದಲ್ಲಿ ವೇದಿಕೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ಪತ್ರ ಕರ್ತರ ಸಂಘದ ವಿಜಯನಗರ ಜಿಲ್ಲಾ ಘಟಕದ ಧ್ಯಕ್ಷರಾದ ಬಿ.ಹೆಚ್.ಎಸ್. ರಾಜು ಮಾತನಾಡಿ ಪತ್ರ ಕರ್ತರು ಸಮಾಜದಲ್ಲಿನ ಅಂಕು ಡೊಂಕು ಗಳನ್ನು ತಿದ್ದುತ್ತಾ ಸಮಾಜಕ್ಕೆ ಅನುಕೂಲ ಮಾಡಬೇಕೆ ವಿನಹ ವಸೂಲಿಯಲ್ಲಿ ಭಾಗಿ ಯಾಗಬಾರದು, ನಿಮ್ಮ ಬರವಣಿಗೆಯ ಮೂಲಕ ಸಮಾಜ ನಿಮ್ಮನ್ನು ಗುರುತಿಸುವಂತೆ ಮುನ್ನಡೆಯಬೇಕು. ಪತ್ರಿಕಾ ರಂಗವು ಮುಗಿಯದ ಅಧ್ಯಾಯ ಜೀವನ ಪರ್ಯಂತ ಹೊಸದು ಕಲಿಯುವಂತದ್ದು ಇದ್ದೆ ಇರುತ್ತದೆ. ಹಾಗಾಗಿ ಪ್ರಾಮಾಣಿಕವಾಗಿ ಮತ್ತು ಪಾರದರ್ಶಕವಾಗಿ ಈ ರಂಗದಲ್ಲಿ ಕೆಲಸ ಮಾಡಬೇಕು. ಸಮಾಜವು ನಮ್ಮನ್ನು
ನೋಡುತ್ತಿರುತ್ತದೆ ಅದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಮೇಲಿರುವ ಸಮಾಜದ ಜವಾಬ್ದಾರಿಯನ್ನು ನಿಷ್ಠೆಯಿಂದ ಮಾಡಬೇಕೆಂದು ಯುವ ಪತ್ರಕರ್ತರಿಗೆ ಸಲಹೆ ನೀಡಿದರು.
ಉದ್ಘಾಟಕರಾಗಿ ಆಗಮಿಸಿದ್ದ ಕಮಲಾಪುರ ಪಟ್ಟಣ ಪಂಚಾಯಿತಿಯ ಸದಸ್ಯರಾದ ಬಿ. ರವಿಕುಮಾರ ರವರು ಗಿಡ–ಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿ ಪತ್ರಿಕಾ ದಿನಾಚರಣೆಯ ಅಂಗವಾಗಿ ಶುಭಾಶಯಕೋರಿ ಮಾತನಾಡಿದ ಅವರು ಪತ್ರಕರ್ತರು ಸಮಾಜದಲ್ಲಿನ ಅಂಕುಡೊಂಕುಗಳತಿದ್ದುವುದಲ್ಲದೆ ಭ್ರಷ್ಟ ಅಧಿಕಾರಿಗಳನ್ನು, ರಾಜಕಾರಣಿಗಳನ್ನು
ಸರಿ ದಾರಿಯಲ್ಲಿ ನಡೆಸುವ ದೊಡ್ಡ ಹೊಣೆಗಾರಿಕೆ ಅವರ ಮೇಲಿರುತ್ತದೆ. ಪತ್ರಿಕೆಗಳು ಒಂದು ವೇಳೆ ಇಲ್ಲದೆ ಹೋದಲ್ಲಿ ಸಮಾಜದಲ್ಲಿ ಏನು ನಡೆಯುತ್ತದೆ ಎಂದು ಹೊರ ಜಗತ್ತಿಗೆ ಗೊತ್ತೇ ಆಗುವುದಿಲ್ಲ. ಅಂತವುಗಳನ್ನು ತಿಳಿಸುವ ಕಾರ್ಯ ಪತ್ರಕರ್ತರು ಮಾಡುತ್ತಾರೆ ನಿಮ್ಮ ಕಾರ್ಯ ಸಮಾಜಕ್ಕೆ ಮಹತ್ವದ್ದಾಗಿದೆ.
ಪತ್ರ ಕರ್ತರಿಗೂ ಹಲವಾರು ಸಮಸ್ಯೆಗಳಿರುತ್ತವೆ ಸರ್ಕಾರಗಳು ಅವರ ಸಮಸ್ಯೆಗಳನ್ನು ಆಲಿಸಿ ಸಹಕರಿಸುವಂತ ಕೆಲಸ ಮಾಡಬೇಕಿದೆ ಎಂದರು.
ಜಿಲ್ಲಾ ಉಪಾಧ್ಯಕ್ಷರಾದ ಗಾಳೆಪ್ಪ, ಆಶ್ರೀತ್, ಚಿದಾನಂದ, ಗೀತಾಸುರೇಶ್, ಕುಬೇರ ಪತ್ರಕರ್ತರ ದಿನಾಚರಣೆಯ ಕುರಿತು ಮಾತನಾಡಿದರು.
ಈ ಸಂಧರ್ಭದಲ್ಲಿ ರಾಮಜಿನಾಯ್ಕ್ ಎಲ್. ಮಂಜುನಾಥ, ರಾಘವೇಂದ್ರ, ವಿಜಯವಾಣಿ, ಶೇಖರ್, ನೇಹಾ, ವೆಂಕಟೇಶ್ ಇತರರಿದ್ದರು.

## ಮಕ್ಕಳಿಗೂ ಇರಬೇಕು ಕಾಲಮಾನದ ಅರಿವು



**ಅಮೀನಗಡ:**ಸೂಳೇಭಾವಿ ಗ್ರಾಮದ ರಾಮಯ್ಯಸ್ವಾಮಿ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ರೈನ್ ಡೇ ಮತ್ತು ಬ್ಲೂ ಡೇ ಕಾರ್ಯಕ್ರಮವನ್ನು ಆಚರಿಸಲಾಯಿತು.
ಕಾರ್ಯಕ್ರಮದ ನಿಮಿತ್ಯ ಮಕ್ಕಳು ವಿವಿಧ ರೀತಿಯ ಬಣ್ಣ ಬಣ್ಣದ ಬಟ್ಟೆ ಮತ್ತು ಛತ್ರಿಗಳನ್ನು ಧರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದರು, ಮಕ್ಕಳ ಮೆರವಣಿಗೆ ಕಂಡು ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.
ಈ ವೇಳೆ ಗುರುಮಾತೆ ಬಿ.ಯು.ಲ್ಯಾವಿ ಮಾತನಾಡಿ, ಮಕ್ಕಳಿಗೆ ಮಳೆಗಾಲದ ಬಗ್ಗೆ ಅರಿವು ಮೂಡಿಸಲು ರೈನ್ ಡೇ ಮತ್ತು ವಿವಿಧ ಬಣ್ಣಗಳ ಬಗ್ಗೆ ಕಲ್ಪನೆ ಮೂಡಿಸಲು ಬ್ಲೂ ಡೇ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ,
ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳಿಗೆ ಎಲ್ಲಾ ಕಾಲಮಾನದ ಬಗ್ಗೆ ಅರಿವು ಮೂಡಿಸುವುದರಿಂದ ಅವರ ಜ್ಞಾನ ಮಟ್ಟವನ್ನು ಹೆಚ್ಚಿಸಬಹುದು ಎಂದರು. ಸಂಸ್ಥೆಯ ಸದಸ್ಯರಾದ ಶಂಕ್ರಪ್ಪ ಜನಿವಾರದ, ರಮೇಶ್ ಕುರಿ, ಶಿಕ್ಷಕಿಯರಾದ ಎನ್. ಎಮ್.ಲವಳಸರ, ಎ.ಸಿ.ಅತ್ತಾರ, ಎಚ್.ಎಸ್. ಗೌಡರ, ಬಿ.ಡಿ.ಮಾದರ ಸೇರಿದಂತೆ ಇನ್ನಿತರರು ಇದ್ದರು.

## ಪರೀಕ್ಷಾ ಕೇಂದ್ರ ರದ್ದು ಖಂಡಿಸಿ ಪ್ರತಿಭಟನೆ ತಹಶೀಲ್ದಾರಗೆ ಮನವಿ




**ತಾಳಿಕೋಟಿ :** ಪಟ್ಟಣದ ಶ್ರೀ ಖಾಸ್ಗತೇಶ್ವರ ಸಂಗೀತ ಮಹಾವಿದ್ಯಾಲಯದಲ್ಲಿ 40 ವರ್ಷಗಳಿಂದ ನಡೆಯುತ್ತಾ ಬಂದಿರುವ ಹಿಂದುಸ್ತಾನಿ ಸಂಗೀತ ನೃತ್ಯ ತಾಳವಾದ್ಯ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿರುವುದನ್ನು ಖಂಡಿಸಿ ಅದನ್ನು ಮತ್ತೆ ಪುನರ್ ಆರಂಭಿಸಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿ ವಿವಿಧ ಸಂಗೀತ ಶಾಲೆಯ ಮುಖ್ಯಸ್ಥರು ನಾಗಿರಿಕರ ಬೆಂಬಲದೊಂದಿಗೆ ಶನಿವಾರ ಶಾಂತಿಯುತ ಪ್ರತಿಭಟನೆ ನಡೆಸಿ ತಹಸಿಲ್ದಾರ್ ಮೂಲಕ ಉನ್ನತ ಶಿಕ್ಷಣ ಸಚಿವರು, ಸಂಗೀತ ಮತ್ತು ಪ್ರಾದೇಶಿಕ ಕಲೆಗಳ ವಿಶ್ವವಿದ್ಯಾಲಯ ಮೈಸೂರು ಕುಲಪತಿಗಳ ಇವರಿಗೆ ಮನವಿ ಸಲ್ಲಿಸಿದರು. ಈ ಸಮಯದಲ್ಲಿ ಸಂಗೀತ ಶಾಲೆಯ ಮುಖ್ಯಸ್ಥರು ಹಾಗೂ ನಾಗರಿಕರು ಮಾತನಾಡಿ ಸುಮಾರು 40 ವರ್ಷಗಳಿಂದ ಈ ಭಾಗದಲ್ಲಿರುವ ಅಂ–ಧರು ಅನಾಥರು ಹಾಗೂ ನಿರ್ಗತಿಕರಿಗೆ ಊಟ ವಸತಿಯ ವ್ಯವಸ್ಥೆಯನ್ನು ಕಲ್ಪಿಸಿ ಸಂಗೀತ ವಿಧ್ಯಯನ್ನು ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಶ್ರಮಿಸುತ್ತಾ ಬಂದು ಸಂಗೀತ ಕಾಶಿ ಎಂದೆ ಪ್ರಸಿದ್ಧವಾಗಿರುವ ಶ್ರೀ ಖಾಸ್ಗತೇಶ್ವರ ಸಂಗೀತ ಮಾವಿದ್ಯಾಲಯದಲ್ಲಿನಡೆಯುತ್ತಾ ಬಂದಿರುವ ಪರೀಕ್ಷಾ ಕೇಂದ್ರವನ್ನು ಏಕಾಏಕಿ ರದ್ದುಗೊಳಿಸಿ ಅದನ್ನು ಮೈಸೂರಿನ ಡಾ. ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿರುವುದು ಖಂಡನೀಯವಾಗಿದೆ ಇದರಿಂದ ಗ್ರಾಮೀಣಭಾಗದವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗುತ್ತದೆ ಕಾರಣ ಇದನ್ನು ರದ್ದುಗೊಳಿಸಿ ಮತ್ತೆ ಮೊದಲಿನಂತೆ ತಾಳಿಕೋಟಿ ಸಂಗೀತ ಮಹಾವಿದ್ಯಾಲಯದಲ್ಲಿ ಪರೀಕ್ಷಾ ಕೇಂದ್ರವನ್ನು ನಡೆಸಲು ಅನುವುಮಾಡಲುಕೊಡಬೇಕೆಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರಲ್ಲಿ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಶ್ರೀ ಖಾಸ್ಗತೇಶ್ವರ ಮಠ ಮುಖ್ಯಸ್ಥ ವೇ.ಮೂ.ಮುರಗೇಶ ವಿರಕ್ತಮಠ. ಆದಯ್ಯ ಹಿರೇಮಠ ಭಂಟನೂರ. ಸಂಗಮೇಶ್ ಶಿವಣಗಿ. ಈಶ್ವರ್ ಬಡಿಗೇರ. ನಿಂಗಣ್ಣ ಪತ್ತಾರ ಕೊಡೆಕಲ್. ಪ್ರವೀಣ ಪತ್ತಾರ ಹುಣಸಗಿ. ಗುರು ಬಿರಾದಾರ ಹುಣಸಗಿ. ಬಸವರಾಜ್ ಸಾವಳಗಿ ಮುದ್ದೇಬಿಹಾಳ. ಶ್ವೇತಾ ಯರಗಲ್. ಕಾಶಿನಾಥ್ ಕಾರಗನೂರು.
ಗೋಪಾಲ್ ಕಟ್ಟಿಮನಿ. ದಿಲೀಪಸಿಂಗಹಜೇರಿ.ದೇವರಾಜ್ ಏರ್ಕಾಳ್. ಅಮರೇಶ್ ಇಂಗಳಗಿ ಪರುಶುರಾಮ್ ಚಳ್ಳಗಿ. ಎಲ್ಲಪ್ಪ. ನಾಗರಾಜ್ ಹುಗಾರ. ಸುರೇಶ್ ಹೂಗಾರ. ವಿನೋದ ಕುಮಾರ ಚಿಕ್ಕಮಠ.ವೀರೇಶ್ ಬಡಿಗೇರ ಹನುಮಂತ ಭಂಟನೂರ ರಿಯಾಜ್ ಮುಲ್ಲಾ ಹಾಗೂ ವಿವಿಧ ಸಮಾಜದ ಗಣ್ಯರು ಪಾಲ್ಗೊಂಡಿದ್ದರು. ಪ್ರತಿಭಟನೆಯಲ್ಲಿ ಕೈಯಲ್ಲಿ ಫ್ಲೆಕಾಡ್ಸ ಹಿಡಿದುಕೊಂಡು ಸಾರ್ವಜನಿಕರ ಗಮನ ಸೆಳೆದರು.

# ಕೃಷ್ಣಾ ನದಿಯಲ್ಲಿ ಕೊಚ್ಚಿ ಹೋದ ಆಲಗೂರ ಗ್ರಾಮದ ಸಿದ್ದಪ್ಪ



**ಜಮಖಂಡಿ :** ತಾಲೂಕಿನ ಆಲಗೂರ ಗ್ರಾಮದಲ್ಲಿ ಕೃಷ್ಣಾನದಿಯಲ್ಲಿ ನೀರಿಮ ಹರಿವು ಹೆಚ್ಚಾಗಿದ್ದು ವ್ಯಕ್ತಿಯೊಬ್ಬ ನೀರಿನಲ್ಲಿ ಕೊಚ್ಚಿಕೊಂಡು ಹೋಗಿರುವ ಘಟನೆಯೊಂದು ಜರುಗಿದೆ.

ಆಲಗೂರ ಗ್ರಾಮದ ಸಿದ್ದಪ್ಪ ಭೀಮಪ್ಪ ಯಡಹಳ್ಳಿ (60) ಮೇವು ತರಲೆಂದು ನದಿ ಹಿನ್ನೀರಿನಲ್ಲಿ ತಮ್ಮ ಗಡ್ಡೆಗೆ ತೆರುಳಿ ಮರಳಿ ಬರುವಾಗ ನೀರಿನಮಟ್ಟ ಹೆಚ್ಚಿದ್ದರಿಂದ ಆಕಸ್ಮಿಕವಾಗಿ ನೀರಿನಲ್ಲಿ ಬಿದ್ದು ಕೊಚ್ಚಿಕೊಂಡು ಹೋಗಿರುವ ಘಟನೆ ನಡೆದಿದೆ.

ಆಲಗೂರ ಗ್ರಾಮದ ಸಿದ್ದಪ್ಪ ಭೀಮಪ್ಪ ಯಡಹಳ್ಳಿ ನುರಿತ ಈಜುಗಾರನಾಗಿದ್ದು, ನದಿಯಲ್ಲಿ ನೀರಿನ ಸೆಳೆತ ಹೆಚ್ಚಾಗಿದ್ದು,

ವ್ಯಕ್ತಿ ಬಿದ್ದಿರುವ ಸ್ಥಳದ ನಿಖರ ಮಾಹಿತಿ ಇರದ ಕಾರಣ ಶೋಧ ಕಾರ್ಯ ನಿರಂತರವಾಗಿಜ ಮುಂದುವರೆದಿದ್ದು, ಘಟನಾ ಸ್ಥಳದಲ್ಲಿ ಮೇವು ಹಾಕಿದ್ದ ಸೈಕಲ್ ಮಾತ್ರ ಸಿಕ್ಕಿದ್ದು ಅಗ್ನಿಶಾಮಕದಳದ ಸಿಬ್ಬಂದಿಗಳು ಕಾರ್ಯಾಚರಣೆ ಮುಂದುವರೆಸಿದ್ದಾರೆ.

ಇದೇ ಸಂದರ್ಭದಲ್ಲಿ ಸಿಪಿಐ ಮಲ್ಲಪ್ಪ ಮಡ್ಡಿ, ಸಹಿತ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

# ತಮದಡ್ಡಿಯಲ್ಲಿ ಮನೆಗಳಿಗೆ ನುಗ್ಗುತ್ತಿರುವ ನೀರು

## ಸಂತ್ರಸ್ತರನ್ನು ಸ್ಥಳಾಂತರಗೊಳಿಸಲು ಅಧಿಕಾರಿಗಳು ಹೈರಾಣ

**ತೇರದಾಳ :** ಹೊಳಿ ಬಂದಾಗ ಬರರ್ತೀರಿ, ಬ್ಯಾರೆ ಕಡೆ ಹೋಗ್ರಿ ಅಂತೀರಿ. ನಮ್ಮ ಸಮಸ್ಯೆ ಹೇಳಿದ್ರ ಮಾಡನೂ ಅಂತೀರಿ. ಹೊಳಿ ಇಳದ ಮ್ಯಾಗ ಯಾರೂ ನಮ್ಮ ಕಡೆ ಬರಾಂಗಿಲ್ಲರಿ. ಈ ಸಲ ಏನರೇ ಆಗಲಿ ನಾವು ಇಲ್ಲಿಂದ ಹೊರಗ ಎಲ್ಲಿಯೂ ಬರೋದಿಲ್ಲ ನೋಡ್ರಿ.. ಇದು ಕೃಷ್ಣಾ ನದಿ ತೀರದ ತಮದಡ್ಡಿ ಗ್ರಾಮದ ಹರಿಜನ ಕೇರಿ ಮುಖಾಂತರ ಹೋಗುವ ತೋಟದವಸತಿಜನಅಧಿಕಾರಿಗಳ ಮುಂದೆ ಹೇಳಿದ ನೋವಿನ ತೊದಲು ಮಾತುಗಳು.



ಹೌದು. ತಮದಡ್ಡಿ ಗ್ರಾಮದ ಕೃಷ್ಣಾ ನದಿಯಲ್ಲಿ ನೀರು ಅಪಾರ ಪ್ರಮಾಣದಲ್ಲಿ ಹೆಚ್ಚಳಗೊಂಡಿದ್ದು, ಹರಿಜನ ಕೇರಿಯ ಸುತ್ತಮುಲ್ಲಿನ ಮನೆಗಳಿಗೆ ನೀರು ನುಗ್ಗುತ್ತಿದೆ. ಶನಿವಾರ ಎಂಟು ಮನೆಗಳಿಗೆ ನೀರು ಸುತ್ತುವರೆದಿದ್ದು, ಸಂತ್ರಸ್ತರನ್ನು ಗ್ರಾಮದ ಸರಕಾರಿ ಪ್ರೌಢಶಾಲೆಗೆ ಸ್ಥಳಾಂತರಿಸುವಲ್ಲಿ ಅಧಿಕಾರಿಗಳು ಹೋಗುತ್ತಿದ್ದಂತೆ ಮೊದಲು ನಮಗೆ ರಸ್ತೆ ನಿರ್ಮಿಸಿ. ಸಮಸ್ಯೆ ಕುರಿತು ಹೇಳಿ ಹೇಳಿ ಸಾಕಾಗಿದೆ. ಪ್ರವಾಹ ಬಂದರೆ ಮೊದಲು ನಮ್ಮಲ್ಲಿಯೇ ಬರುತ್ತದೆ. ಹೀಗಿರುವಾಗ ಸಮಸ್ಯೆಗೆ ಏಕೆ ಸ್ಪಂಧಿಸುತ್ತಿಲ್ಲ. ನಮಗೆ ಶಾಶ್ವತ ಪರಿಹಾರ ನೀಡಿ. ಅಲ್ಲಿಯವರೆಗೆ ಇಲ್ಲಿಂದ ನಾವು ಎಲ್ಲಿಯೂ ಹೋಗುವುದಿಲ್ಲ ಎಂದು ಹಠ ಹಿಡಿದರು. ನೋಡಲ್ ಅಧಿಕಾರಿ ಆನಂದ ಕೆಸರಗೊಪ್ಪ, ಪಿಎಸ್‌ಐ ಅಪ್ಪು ಐಗಳಿ ಹಾಗೂ ಗ್ರಾಪಂ ಪಿಡಿಒ ರಸ್ತೆಗೆ ಮೊದಲು ಆಧ್ಯತೆ ನೀಡಲಾಗುವುದು. ಮೊದಲು ಸುರಕ್ಷಿತ ಸ್ಥಳಕ್ಕೆ ಬನ್ನಿ. ಶಾಶ್ವತ ಪರಿಹಾರದ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿ ಹೇಳಿ ಸಂತ್ರಸ್ತರು ಸ್ಥಳಾಂತರಗೊಳ್ಳಲು ಒಪ್ಪಿಸಿದರು.

# ಟೊಮೆಟೊಗೆ ಬಂಗಾರ ಬೆಲೆ ಸಿಗುತ್ತಿರುವ ಸಮಯದಲ್ಲಿ ಕೈ ಜಾರಿದ ತುತ್ತು

**ಮೂಡಲಗಿ :** ಟೊಮೆಟೊ ಸದ್ಯದ ಪರಿಸ್ಥಿಯಲ್ಲಿ 100 ರೂಗಳಗಿಂತಲು ಹೆಚ್ಚಿನ ಮೌಲ್ಯಕ್ಕೆ ಮಾರಾಟ ಆಗುತ್ತಿದ್ದ ಸಮಯದಲ್ಲಿ ಮಳೆಯ ಆವಾಂತರದಿಂದ ಹೊಳೆಯು ಪ್ರವಾಹದ ರೂಪದಲ್ಲಿ ಬಂದೆರಗಿ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬತಾಗಿದೆ ರೈತನ ಬದುಕು ಸಮೀಪದ ಅರಳಿಮಟ್ಟಿ ಗ್ರಾಮದ ಶಿವಾನಂದ್ ಮಲ್ಲಪ್ಪ ಬ್ಯಾಳಿ ಇವರ ಜಮೀನಿನಲ್ಲಿ ಎರಡು ಎಕರೆ ಟೊಮೆಟೊ ಒಂದು ಎಕರೆ ಬದನೆಕಾಯಿ ಘಟಪ್ರಭಾನದಿ ಮತ್ತು ಹಿರಣ್ಯಕೇಶಿ ನೀರು ನುಗ್ಗಿ ಫಸಲಿಗೆ ಬಂದ ಬೆಳೆ ಎಲ್ಲಾ ಸಂಪೂರ್ಣ ಜಲಾವೃತಗೊಂಡು ಹಾನಿಯಾಗಿದೆ, ಕಳೆದ ವರ್ಷ ಮಳೆಯಿಲ್ಲದೆ ಬೆಳೆ ಪಡೆಯಲಾರದ ರೈತರು ಇಂದು ಪ್ರವಾಹದಿಂದ ಹಾನಿಗೊಳಗಾಗುತ್ತಿದ್ದಾರೆ.



# ವಾಹನಗಳಿಗೆ ಜಿ.ಪಿ.ಎಸ್ ಮತ್ತು ಪ್ಯಾನಿಕ್ ಬಟನ್ ಆಳವಡಿಕೆಗೆ ವಿರೋಧ

**ವರದಿ: ಲಾಲಸಾಬ ಸವಾರಗೋಳ.**

**ಕೊಲ್ಹಾರ :** ವಾಹನಗಳಿಗೆ ಪ್ಯಾನಿಕ್ ಬಟನ್, ಜಿಪಿಎಸ್ ಅಳವಡಿಕೆ ಮಾಡಲು ಸರ್ಕಾರ ಆದೇಶ ನೀಡಿರುವುದು ಅವೈಜ್ಞಾನಿಕವಾಗಿದ್ದು, ಕೂಡಲೇ ಸರ್ಕಾರ ಈ ಆದೇಶ ಹಿಂಪಡೆಯಬೇಕು ಎಂದು ಕರ್ನಾಟಕ ಚಾಲಕರ ಒಕ್ಕೂಟ ಸಂಘದ ಕೊಲ್ಹಾರ ತಾಲೂಕಾ ಪದಾಧಿಕಾರಿಗಳ ನೇತೃತ್ವದಲ್ಲಿ ತಾಲೂಕ ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಒಕ್ಕೂಟದ ತಾಲೂಕು ಅಧ್ಯಕ್ಷ ಸಿದ್ಧ ಗಣಿ ಮಾತನಾಡಿ, ವಾಹನಗಳಿಗೆ ಜಿ.ಪಿ.ಎಸ್ ಮತ್ತು ಪ್ಯಾನಿಕ್ ಬಟನ್ ಆಳವಡಿಸಲು ಸರ್ಕಾರ ಆದೇಶ ನೀಡಿದ್ದು ಅದು ಅವೈಜ್ಞಾನಿಕವಾಗಿದೆ. ಬಡ ಚಾಲಕರಿಗೆ ಆರ್ಥಿಕ ಹೊರೆಯಾಗುತ್ತಿದ್ದು ಕೂಡಲೇ ಆದೇಶವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಅಲ್ಲದೆ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಏಜೆಂಟರ ಹಾವಳಿ ಅತೀಯಾಗಿದ್ದು ಚಾಲನಾ ಪರವಾನಿಗೆ, ಚಾಲನಾ ನವೀಕರಣ ಹಾಗೂ ಇತರೆ ಕೆಲಸಗಳಿಗಾಗಿ ಪ್ರಾದೇಶಿಕ ಸಾರಿಗೆ ಕಚೇರಿಗೆ ತೆರಳಿದರೆ ಅಧಿಕಾರಿಗಳು ಸ್ಪಂದನೆ ನೀಡದೆ ಏಜೆಂಟರ ಮೂಲಕ ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಮೊತ್ತ ಪಡೆದು ಕೆಲಸಗಳನ್ನು ಮಾಡುತ್ತಿದ್ದಾರೆ. ಹಣ ಕೊಡದಿದ್ದಲ್ಲಿ ಸುಖಾಸುಮ್ಮನೆ ಚಾಲಕರನ್ನು ಸತಾಯಿಸುವ ಕೆಲಸ ಮಾಡುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಗೈಬು ನದಾಫ, ಹಸನ ಕಲಾದಗಿ, ಅಮೀರ ಕೊರ್ತಿ, ಅಶ್ಫಾಕ ರಬಿನಾಳ, ಶಿವು ಹಗೆದಾಳ, ಆನಂದ ಬಜಂತ್ರಿ, ಗೈಬು ಹಳ್ಳಿ, ಕಾಲೀಕ ರಬಿನಾಳ, ಕಾಡು ನಾಲತವಾಡ ಹಾಗೂ ಇನ್ನೂ ಅನೇಕರು ಭಾಗವಹಿಸಿದ್ದರು.

# ಮುಸಗುಪ್ಪಿ ತಿಗಡಿ ಸೇತುವೆ ಜಲಾವೃತ

## ಹೊಳೆಯ ದಡದಲ್ಲಿ ಸೆಲ್ಫಿಗಾಗಿ ಹೋಗದಂತೆ ವಿನಂತಿ



**ಮೂಡಲಗಿ :** ಸಮೀಪದ ಮುಸಗುಪ್ಪಿ ಮಹಾಲಕ್ಷ್ಮೀ ದೇವಸ್ಥಾನವನ್ನು ಶುಕ್ರವಾರ ಸುತ್ತುವರೆದ ಘಟಪ್ರಭಾ ನದಿ ಇಂದು ಮುಸಗುಪ್ಪಿ ತಿಗಡಿ ಸೇತುವೆಯನ್ನು ಮುಳುಗಡೆಯಾಗಿಸಿದೆ. ಹೊಳೆಯ ದಡದಲ್ಲಿರು ಹಲವಾರುಮನೆಗಳನ್ನುಪೋಲಿಸಸಿಬ್ಬಂದಿಹಾಗೂಪಿಡಿಓಖಾಲಿಮಾಡಿಸಿಕಾಳಜಿಕೇಂದ್ರಗಳಿಗೆಕಳಿಸಿದ್ದಾರೆ, ತಿಗಡಿ ಕುಲಗೋಡ,ಯಾದವಾಡದ ಸಂಪರ್ಕದ ಕೊಂಡಿಯಾಗಿದ್ದ ಈ ಸೇತುವೆ ಮುಳುಗಡೆಯಿಂದ ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ,

ಇಂದು ಮಳೆಯಿಂದ ಮುಕ್ತವಾದ ಮೂಡಲಗಿ ತಾಲೂಕಿನ ಜನತೆ ಸ್ವಲ್ಪ ಮಟ್ಟಿಗೆ ನೀರಾಳತೆಯನ್ನು ಕಂಡಿದೆ, ಮುಸಗುಪ್ಪಿ, ಹುಣಶ್ಯಾಳ, ವಡೆರಹಟ್ಟಿ ಗ್ರಾಮಗಳಲ್ಲಿ ನಿರ್ಮಿಸಿದ ಕಾಳಜಿ ಕೇಂದ್ರಕ್ಕೆ ಜನರು ಇಂದು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದು ಕಾಳಜಿ ಕೇಂದ್ರದಲ್ಲಿ ಊಟ,ಉಪಹಾರ,ವಸತಿ, ಆರೋಗ್ಯದ ಕಾಳಜಿಯೊಂದಿಗೆ ಪೋಲಿಸ ಸಿಬ್ಬಂದಿಯಿಂದ ರಕ್ಷಣೆಯನ್ನು ಒದಗಿಸಿಲಾಗಿದೆ ಎಂದು ತಹಶೀಲ್ದಾರ ಮಹಾದೇವ ಸನಮೂರಿ ತೀಳಿಸಿದ್ದಾರೆ,

ನಿರಂತರ ಮಳೆಯಾಗುತ್ತಿರುವದರಿಂದ ಹೊಳೆಗಳು ತುಂಬಿ ಹರಿಯುತ್ತಿರುವಾಗ ಪೋಲಿಸ ಸಿಬ್ಬಂದಿಯ ಮಾತುಗಳಿಗೆ ಮಾನತ್ಯೆ ನೀಡಿ, ತೀರ ಹತ್ತಿರ ಹೋಗಿ ಸೆಲ್ಫಿ ತೆಗೆದುಕೊಳ್ಳದಂತೆಯು ವಿನಂತಿಸಿದ್ದಾರೆ ಜೀವ ಅಮೂಲ್ಯ ಪ್ರವಾಹದ ಬಗ್ಗೆ ಜಾಗೃತರಾಗಿರಲು ತಾಲೂಕಾ ದಂಡಾಧಿಕಾರಿ ಮಹಾದೇವ ಸನಮೂರಿ ಹಾಗೂ ತಾ.ಪಂ ನರೇಗಾಧಿಕಾರಿ ಚಂದ್ರಶೇಖರ ಬಾರ್ಕಿ ಸಾರ್ವಜನಿಕರಿಗೆ ವಿನಂತಿಸಿದ್ದಾರೆ.



ಕೃಷ್ಣಾ ನದಿ ದಡದ ಹಳಿಂಗಳಿ ಗ್ರಾಮದ ಗುಳ್ಳಿಮಳ್ಳಿಯಲ್ಲಿ ವಾಸಿಸುತ್ತಿರುವ 37 ಕುಟುಂಬಗಳಿಗೆ ಮುಂಜಾಗ್ರತವಾಗಿ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ನೋಡಲ್ ಅಧಿಕಾರಿ ಚೇತನ ಅಬ್ಬಿಗೇರ ಹಾಗೂ ಇತರೆ ಅಧಿಕಾರಿಗಳು ಸೂಚನೆ ನೀಡಿದ ಹಿನ್ನಲೆಯಲ್ಲಿ ಕೆಲ ಕುಟುಂಬದವರು ಗ್ರಾಮದ ಮಹಾವೀರ ಶಾಲೆಯಲ್ಲಿ ಸ್ಥಳಾಂತರಗೊಂಡರು.



ಕೃಷ್ಣಾ ನದಿ ದಡದ ಹಳಿಂಗಳಿ ಗ್ರಾಮದ ಗುಳ್ಳಿಮಳ್ಳಿಯಲ್ಲಿ ವಾಸಿಸುತ್ತಿರುವ ಕುಟುಂಬಸ್ಥರು ತಮ್ಮ ಜಾನುವಾರಗಳೊಂದಿಗೆ ಸುರಕ್ಷಿತ ಸ್ಥಳಕ್ಕೆ ನೋಡಲ್ ಅಧಿಕಾರಿ ಚೇತನ ಅಬ್ಬಿಗೇರ, ಗ್ರಾಪಂ ಅಧ್ಯಕ್ಷ ಪ್ರದೀಪ ನಂದೆಪ್ಪನವರ ಸ್ಥಳಾಂತರಿಸಿದರು.



ಮೂಡಲಗಿ : ಮೂಡಲಗಿ ತಾಲೂಕಿನ ಅರಳಿಮಟ್ಟಿ ಗ್ರಾಮದ ಸುಭಾಸ ಅಲ್ಲಪ್ಪ ಖಾನಪ್ಪನವರಇವರ ಜಮೀನಿನಲ್ಲಿ ಒಂದು ಎಕರೆ ಬೆಂಡೆಕಾಯಿ ಮತ್ತು ಸವತೆಕಾಯಿ ಘಟಪ್ರಭಾನದಿ ಮತ್ತು ಹಿರಣ್ಯಕೇಶಿ ನೀರು ನುಗ್ಗಿ ಬೆಳೆ ಸಂಪೂರ್ಣ ಹಾನಿಯಾಗಿದೆ ಸದ್ಯದ ಪರಿಸ್ಥಿತಿಯಲ್ಲಿ ಉತ್ತಮ ಬೆಲೆಗೆ ಮಾರಾಟವಾಗುತ್ತಿದ್ದ ತರಕಾರಿಗಳು ಮಳೆಯಿಂದಾಗಿ ಹಾನಿಯಾಗುತ್ತಿರುವದು ರೈತರಿಗೆ ಅಷ್ಟೆ ಅಲ್ಲದೆ ಸಾರ್ವಜನಿಕರಿಗೆ ಮುಂದಿನ ದಿನದಲ್ಲಿ ದುಬಾರಿ ಬೆಲೆ ತೆರಬೇಕಾದ ಅನಿವಾರ್ಯತೆ ಒದಗುತ್ತದೆ,

# ಬದುಕುವ ರೀತಿ ತಿಳಿಸಿದ ಹಡಪದ ಅಪ್ಪಣ್ಣ

**ಜಮಖಂಡಿ :** ನುಡಿದರೆ ಗುರುವಾಗಿರಬೇಕು. ನಡೆದರೆ ಆಚಾರ ಇರಬೇಕು. ಕುಳಿತರೆ ಲಿಂಗವಾಗಿರಬೇಕು. ಇದ್ದರೆ ಜಂಗಮನಾಗಿರಬೇಕು ಎಂದು ತಮ್ಮ ಒಂದು ವಚನದ ಮೂಲಕ ಬದುಕುವ ರೀತಿ ಕುರಿತು ನಿಜಸುಖಿ ಹಡಪದ ಅಪ್ಪಣ್ಣನವರು ತಿಳಿಸಿದ್ದಾರೆ ಎಂದು ಹಿರಿಯ ಸಾಹಿತಿ ಪ್ರೊ.ಬಸವರಾಜ ಕಡ್ಡಿ ಹೇಳಿದರು.

ನಿಜಸುಖಿ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ಆಶ್ರಯದಲ್ಲಿಇಲ್ಲಿನಕಾಡಸಿದ್ಧೇಶ್ವರ ಮಂಗಲ ಕಾರ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ ನಿಜಸುಖಿ ಹಡಪದ ಅಪ್ಪಣ್ಣ ಹಾಗೂ ಶಿವಶರಣೆ ಲಿಂಗಮ್ಮ ತಾಯಿಯವರ ಜಯಂತ್ಯುತ್ಸವದಲ್ಲಿ ಅವರು ಅನುಭಾವ ಹಂಚಿಕೊಂಡರು.





ಗುರು ಎಂದರೆ ಜ್ಞಾನದ ಸಂಕೇತ. ಅಜ್ಞಾನ ಕಳೆದು ಜ್ಞಾನ ಉಂಟು ಮಾಡುವವನು ಗುರು. ನಡೆದರೆ ಆಚಾರ ವಿಚಾರ ಸುವಿಚಾರ ಇರಬೇಕು. ಲಿಂಗವಾಗಿರಬೇಕು ಎಂದರೆ ಸುಖ–ದುಃಖ, ಲಾಭ–ಹಾನಿ ಲೆಕ್ಕಿಸದೆ ಮೌನವಾಗಿರಬೇಕು.

ಇದ್ದರೆ ಜಂಗಮನಾಗಿರಬೇಕು ಎಂದರೆ ತತ್ತ್ವಪ್ರಚಾರಕ ಅಥವಾ ಸಮಾಜ ಸುಧಾರಕನಾಗಿರಬೇಕು ಎಂಬುದು ಅಪ್ಪಣ್ಣನವರ ಸಂದೇಶವಾಗಿದೆ ಎಂದು ವಿವರಿಸಿದರು.

ಬಸವಜ್ಯೋತಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ ಮಾತನಾಡಿ, 12ನೇ ಶತಮಾನದಲ್ಲಿ ನಡೆದ ವಚನ ಚಳವಳಿ ಮತ್ತು ಸಾಮಾಜಿಕ ಕ್ರಾಂತಿಯ ಹರಿಕಾರರಲ್ಲಿ ಹಡಪದ ಅಪ್ಪಣ್ಣನವರು ಒಬ್ಬರಾಗಿದ್ದರು. ಅವರಿಗೆ ನಿಜಸುಖಿ ಬಿರುದನ್ನು ಬಸವಣ್ಣನವರೆ ಕೊಟ್ಟಿದ್ದರು. ಅಪ್ಪಣ್ಣನವರು ಅನುಭವ ಮಂಟಪದ ಪ್ರಧಾನ ಕಾರ್ಯ ದರ್ಶಿಯಾಗಿದ್ದರು ಎಂದರು.

ನಿವೃತ್ತ ಶಿಕ್ಷಕ ಕೆ.ಕೆ. ತುಪ್ಪದ ಮಾತನಾಡಿದರು. ಕಲ್ಯಾಣಮಠದ ಗೌರಿಶಂಕರ ಮಹಾಸ್ವಾಮಿಗಳು ಹಾಗೂಮುತ್ತಿನಕಂತಿಹಿರೇಮಠದ ಶಿವಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ದ್ವಿತೀಯ ಪಿಯುಸಿಯ ಪ್ರತಿಭಾವಂತ ವಿದ್ಯಾರ್ಥಿನಿಯರಾದ ಜ್ಯೋತಿ ಹಡಪದ (ಪುಷ್ಪಾತಾಯಿ ಪಪೂ ಕಾಲೇಜು), ಶಿವಲಿಂಗೇಶ್ವರಿ ನಾವಿ (ಬಸವಜ್ಯೋತಿ ಪಪೂ ಕಾಲೇಜು), ಭಜನಾ ಕಲಾವಿದ ಭೀಮಶಿ ಹಡಪದ, ನಿವೃತ್ತ ಯೋಧ ಚಂದಪ್ಪ ನಾವಿ ಅವರನ್ನು ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ರಮೇಶ ನಾವಿ ಅಧ್ಯಕ್ಷತೆ ವಹಿಸಿದ್ದರು. ರಾಜೇಶ್ವರಿ ಪ್ರಾರ್ಥನೆ ಗೀತೆ ಹಾಡಿದರು. ಸಂಘದ ಕಾರ್ಯದರ್ಶಿ ಮಹಾದೇವ ಜಂಬಗಿ ಸ್ವಾಗತಿಸಿದರು. ಶಿಕ್ಷಕ ಶಿವಲಿಂಗ ನಾವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಸುರೇಶ ನಾವಿ ನಿರೂಪಿಸಿ, ವಂದಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಮುತ್ತೈದೆಯರ ಉಡಿ ತುಂಬಲಾಯಿತು.

# ಬಿಜೆಪಿ ಗ್ರಾಮೀಣ ಮಂಡಲದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

**ಬಾಗಲಕೋಟೆ :** ಪ್ರವಾಹ ಪಿಡಿತ ಪ್ರದೇಶಗಳಲ್ಲಿ ಬಿಜೆಪಿ ಕಾರ್ಯಕರ್ತರು ಜಾಗೃತಿ ವಹಿಸಿ ಜನರ ಸೇವೆ ಮಾಡಿರಿ, ನಮ್ಮ ನಮ್ಮ ಕ್ಷೇತ್ರದಲ್ಲೂ ಎಲ್ಲರೂ ಸೇರಿ ಕಾರ್ಯೋನ್ಮುಖರಾಗೋಣ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ಬಿ.ವಿ.ವಿ.ಸಂಘದ ನೂತನ ಸಭಾಭವನದಲ್ಲಿ ಶನಿವಾರ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಗ್ರಾಮೀಣ ಮಂಡಲದ ನೂತನ ಪದಾಧಿಕಾರಿಗಳು ವಿವಿಧ ಮೋರ್ಚಾ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.



ಜಿಲ್ಲೆಯಲ್ಲಿ ನದಿಗಳು ತುಂಬಿ ಹರಿಯುತ್ತಿದ್ದು ಯಾವುದೆ ಕ್ಷಣ ಪ್ರವಾಹ ಸಂದರ್ಭ ಬರಹಬಹುದುಇಂಥಸಮಯದಲ್ಲಿನಮ್ಮೆಲ್ಲ ಬಿಜೆಪಿ ಕಾರ್ಯಕರ್ತರು ಜಾಗೃತರಾಗಿ ಜನರ ಸೇವೆ ಮಾಡಿ ಜನರ ಸುರಕ್ಷತೆಯನ್ನು ಕಾಪಾಡಬೇಕು, ನಮ್ಮ ಕೇತ್ರಗಳಲ್ಲಿ ಎಲ್ಲರೂ ಸೇರಿ ಕಾರ್ಯೋನ್ಮುಖರಾಗೋಣ, ಪಕ್ಷ ಸಂಘಟನೆ ನಿರಂತರವಾಗಿರುವುದು, ನಗರ ಹಾಗೂ ಗ್ರಾಮೀಣ ಪದಾಧಿಕಾರಿಗಳಿಗೆ ಇದು ಕೆಲಸದ ಹಸ್ತಾಂತರವೆ ಒರತು ಅಧಿಕಾರ ಹಸ್ತಾಂತರ ಅಲ್ಲ, ಬಾಗಲಕೋಟೆ ಮತಕ್ಷೇತ್ರದಲ್ಲಿ ನಗರ ಮತ್ತು ಗ್ರಾಮೀಣ ಮಂಡಲಗಳು ತುಂಭಾನೆ ಶಕ್ತಿಯುತವಾಗಿ ಕ್ರೀಯಾಶೀಲವಾಗಿವೆ, ಮುಂಬರುವ ಜಿಲ್ಲಾ ಹಾಗೂ ತಾಲೂಕ ಪಂಚಾಯತಗಳ ಚುನಾವಣೆಗೆ ಕಾರ್ಯಕರ್ತರು ಸನ್ನದ್ದರಾಗಬೇಕು, ಈಗಾಗಿ ಎಲ್ಲರೂ ತಮ್ಮ ತಮ್ಮ ವೃತ್ತಿಗಳನ್ನು ಮಾಡುವುದರ ಜೊತೆಗೆ ಪಕ್ಷಕ್ಕಾಗಿ ಸ್ವಲ್ಪ ಸಮಯ ಮೀಸಲಿಟ್ಟು ಸಂಘಟನೆ ಮಾಡಿಬೇಕು ಎಂದ ಅವರು ನೆಹರು ನಂತರ 3ನೇ ಬಾರಿಗೆ ಪ್ರಧಾನಿಯಾಗಿರುವರು ಮೋದಿ ಒಬ್ಬರೆ, ಮೊನ್ನೆ ಬಜೆಟ್ ಮಂಡನೆಯಾಗಿದೆ, ಬಜೆಟ್ಟಿನ ಗಾತ್ರ 48 ಲಕ್ಷ ಕೋಟಿಯಷ್ಟು ಇತ್ತು, ದೇಶದಲ್ಲಿ 32 ಲಕ್ಷ ಕೋಟಿ ಬೇರೆ ರೀತಿಯಲ್ಲಿ ಟ್ಯಾಕ್ಸ್ ಬರುತ್ತದೆ, ಅದನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡುವ ಸಾಮರ್ಥ್ಯವುಳ್ಳ ಮಂತ್ರಿಗಳುನಮ್ಮಲ್ಲಿದ್ದಾರೆ,ರಕ್ಷಣಾವಲಯಕ್ಕೆ 6ಲಕ್ಷ ಕೋಟಿ ಕೊಟ್ಟಿರುವುದು ಇತಿಹಾಸದಲ್ಲಿ ಇದೆ ಮೊದಲು, ಮಹಿಳೆಯರಿಗೆ 3 ಲಕ್ಷ ಕೋಟಿ ಮಿಸಲಿಟ್ಟಿದ್ದಾರೆ, ಯುವಕರಿಗೆ ಉದ್ಯೋಗವಕಾಶಕ್ಕಾಗಿ ಮುದ್ರಾಯೋಜನೆಯಲ್ಲಿ 10 ಲಕ್ಷ ಇದ್ದದ್ದನ್ನು 20ಲಕ್ಷಕ್ಕೆ ಏರಿಸಿದ್ದಾರೆ, ಪ್ರತಿಯೊಂದು ಕ್ಷೇತ್ರಕ್ಕೂ ಒತ್ತು ಕೊಟ್ಟಿದ್ದಾರೆ, ನಗರಸಭೆಯ ಅಧ್ಯಕ್ಷ ಉಪಾಧ್ಯಕ್ಷರ ಅವಧಿಮುಗಿದು ಒಂದು ವರೆ ವರ್ಷವಾಯಿತು, ಮಿಸಲಾತಿ ನೇಮಕಮಾಡಿ ಹೊಸಬರನ್ನು ಮಾಡಬೇಕು ಎನ್ನುವ ವಿಚಾರ ಸರಕಾರ ಕೈಬಿಟ್ಟಂತಿದೆ, ಸರಕಾರ ದಿನಕ್ಕೊಂದು ಹಗರಣಗಳಲ್ಲಿ ನಿರಂತರವಾಗಿದೆ ಎಂದರು.

ಬಿಟಿಡಿಎ ಮಾಜಿ ಅಧ್ಯಕ್ಷ ಜಿ.ಎನ್ ಪಾಟೀಲ, ಡಾ.ಎಂ.ಎಸ್.ದಡ್ಡೆನ್ನವರ ಮಾತನಾಡಿ ಕಾರ್ಯಕರ್ತರೆ ಪಕ್ಷದ ಆಧಾರ ಸ್ಥಂಭ, ರೈತರು, ಮಹಿಳೆಯರರಿಗೆ, ಯುವಕರಿಗೆ, ಬಡವರಿಗಾಗಿ ಪ್ರಧಾನಿ ಮೋದಿಯವರ ಬಜೆಟ್ ನಲ್ಲಿ ಅವಕಾಶ ಕೊಟ್ಟಿದ್ದಾರೆ.2047 ಭಾರತ 3ನೇ ಆರ್ಥಿಕ ದೇಶವಾಗುವಲ್ಲಿಯಾವುದೆಸಂದೇಹವಿಲ್ಲಾ, ದೇಶಾಭಿಮಾನ, ದೇಶದ ಅಭಿವೃದ್ಧಿಯೇ ಪಕ್ಷದ ಸಿದ್ದಾಂತವಂದೆ ಬಿಜೆಪಿ ಪಕ್ಷವನ್ನು ಹಿರಿಯರು ಕಟ್ಟಿದ್ದಾರೆ ಅಂಥ ಪಕ್ಷದಲ್ಲಿ ನಾವುಗಳು ಇರುವುದು ಹೆಮ್ಮೆ ಎಂದರು.

ಪ್ರಸ್ತಾವಿಕವಾಗಿಜಿಲ್ಲಾಪ್ರಧಾನಕಾರ್ಯಧರ್ಶಿ ಮಾತನಾಡಿಪಕ್ಷನೀಡುವಎಲ್ಲಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಪರಿಣಾಮ ರಾಜ್ಯದಲ್ಲಿಯೇ ಬಾಗಲಕೋಟೆ ಮತಕ್ಷೇತ್ರದ ಸಂಘಟನೆ ಶಿಸ್ತುಬದ್ದವಾಗಿದೆ ಎಂದರು.

ಜಿಲ್ಲೆಯ ಉಪಾಧ್ಯಕ್ಷರಾದ ಭಾಗೀರತಿ ಪಾಟೀಲ,ಗ್ರಾಮೀಣಮಂಡಲಅಧ್ಯಕ್ಷಸುರೇಶ ಕೊಣ್ಣೂರ, ಸಂಗಣ್ಣ ಕಲಾದಗಿ,ಪ್ರಭುಸ್ವಾಮಿ ಸರಗಣಾಚಾರಿ,ರಾಜು ಮುದೇನೂರ, ಯಲ್ಲಪ್ಪ ಬೆಂಡಿಗೇರಿ, ರಾಮಣ್ಣ ಕುರಿ, ರಂಗನಗೌಡ ಗೌಡರ, ರಂಗಪ್ಪ ದಿಡ್ಡಿಮನಿ, ಮಲ್ಲೇಶ ವಿಜಾಪುರ, ಕಲ್ಲಪ್ಪ ಭಗವತಿ,ಶಿವಾನಂದ ಟವಳಿ, ಬಸವರಾಜ ಹುನಗುಂದ,ಉಮೇಶ ಹಂಚಿನಾಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಗ್ರಾಮೀಣ ಮಂಡಲದ ಪದಾಧೀಕಾರಿಗಳಿಗೆ ಬಿಜೆಪಿಯ ದ್ವಜ ನೀಡಿ ಶಾಲುಹಾಕುವುದರ ಮೂಲಕ ಪಪದಗ್ರಹಣ ಮಾಡಲಾಯಿತು.

# ಸರಕಾರಿ ಶಿಕ್ಷಕರು ಸಂಬಳಕ್ಕೆ ನ್ಯಾಯ ನೀಡಬೇಕು: ತಿಮ್ಮಾಪೂರ



**ಜಮಖಂಡಿ :** ಉತ್ತಮ ಜೀವನ ರೂಪಿಸುವ ವಿದ್ಯಾಮಂದಿರ ನಮ್ಮ ಶಾಲೆಗಳು. ಖಾಸಗಿ ಶಾಲೆಗಳಲ್ಲಿ ಲಭಿಸುವ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿ ದೊರೆಯುವಂತಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ತಾಲೂಕಿನ ಕುಂಬಾರಹಳ್ಳ ಗ್ರಾಮದಲ್ಲಿ ಶನಿವಾರ ಜಿಲ್ಲಾ ಆಡಳಿತ, ಜಿಪಂ, ಶಿಕ್ಷಣ ಇಲಾಖೆಯಿಂದ ನಿರ್ಮಿಸಲಾದ ಆರ್.ಎಂ.ಎಸ್.ಎ. ಸರ್ಕಾರಿ ಪ್ರೌಢ ಶಾಲೆ ನೂತನ ಕಟ್ಟಡದ ಉದ್ಘಾಟನೆ ಮತ್ತು ದಶಮಾನೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸರಕಾರ ನೀಡುವಷ್ಟು ಸಂಬಳ ಖಾಸಗಿ ಶಿಕ್ಷಣ ಸಂಸ್ಥೆಗಳು ನೀಡುವದಿಲ್ಲ. ಆದರೂ ಫಲಿತಾಂಶ ಮತ್ತು ಕಲಿಕೆಯಲ್ಲಿ ಉತ್ತಮವಾಗಿರುತ್ತದೆ. ಸರಕಾರಿ ಶಿಕ್ಷಕರು ತಮ್ಮ ಜವಾಬ್ದಾರಿ ಅರಿತು ತಮ್ಮ ಸಂಬಳಕ್ಕೆ ನ್ಯಾಯ ಕೊಡುವಂತೆ ಶಿಕ್ಷಣ ನೀಡಬೇಕು. ಖಾಸಗಿ ಶಾಲೆ ಅಂಕಿ ಅಂಶ ಕಲಿಸಿದರೆ, ಸರಕಾರಿ ಸಾಲೆ ವಿದ್ಯೆ, ಸರಳತೆ, ಬದುಕಿನ ಭಾವನೆಗಳನ್ನು ಕಲಿಸುತ್ತದೆ. ಬಡವರ ಮಕ್ಕಳು ಖಾಸಗಿ ಶಾಲೆಗಳ ಮಾದರಿಯಲ್ಲಿ ಶಿಕ್ಷಣ ದೊರೆತು ಎಲ್ಲರೂ ಸರ್ಕಾರಿ ಶಾಲೆಗೆ ಪ್ರವೇಶ ಪಡೆಯುವಂತಾಗಬೇಕು. ಮಕ್ಕಳನ್ನು ಹುರಿದುಂಬಿಸಿ ಆತ್ಮವಿಶ್ವಾಸ ಬೆಳೆಸುವ ಮೂಲಕ ಸಮಾಜದಲ್ಲಿ ತಲೆ ಎತ್ತಿ ನಿಲ್ಲುವಂತೆ ಮಾಡಬೇಕು ಎಂದರು.

ಶಾಸಕ ಜಗದೀಶ ಗುಡಗುಂಟಿ ಮಾತನಾಡಿದರು. ಹುಲ್ಯಾಳದ ಗುರುದೇವಾಶ್ರಮದ ಹರ್ಷಾನಂದ ಶ್ರೀಗಳು ಸಾನಿಧ್ಯ ವಹಿಸಿದ್ದರು.

ವೇದಿಕೆಯಲ್ಲಿ ಜಿಲ್ಲಾಧಿಕಾರಿ ಕೆ.ಎಂ.ಜಾನಕಿ, ಜಿಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ, ತಹಶೀಲ್ದಾರ ಸದಾಶಿವ ಮಕ್ಕೊಜಿ, ಸಿಪಿಐ ಮಲ್ಲಪ್ಪ ಮಡ್ಡಿ, ಶಾಲಾಶಿಕ್ಷಣ ಇಲಾಖೆಯ ಬಿ.ಕೆ.ನಂದನೂರ, ಬಿಇಓ ಎ.ಕೆ.ಬಸಣ್ಣವರ, ಮುಖ್ಯೋಪಾಧ್ಯಾಯ ನಾರಾಯಣ ಶಾಸ್ತ್ರಿ, ಗ್ರಾಪಂ. ಅಧ್ಯಕ್ಷೆ ಶಾಂತವ್ವ ಐನಾಪೂರ ಸಹಿತ ಹಲವರು ಇದ್ದರು.

# ಕೃಷ್ಣಾ ನದಿಯಲ್ಲಿ ಅಪಾಯ ಮಟ್ಟದ ಹರಿವು ಪ್ರವಾಹ ಭೀತಿ



**ಜಮಖಂಡಿ :** ರಾಜ್ಯ ಮತ್ತು ಪಕ್ಕದ ಮಹಾರಾಷ್ಟ್ರದ ನಿರಂತರವಾಗಿ ಸುರಿಯುತ್ತಿರುವ ಮಳೆಗೆ ಕೃಷ್ಣಾ ನದಿಯಲ್ಲಿ ನೀರಿನಮಟ್ಟ ಹೆಚ್ಚಾಗುತ್ತಿದ್ದು, ಕೃಷ್ಣಾನದಿ ಅಪಾಯ ಮಟ್ಟದಲ್ಲಿದ್ದು ನದಿ ತೀರದ ಜನರು ಜಾಗೃತರಾಗಿರಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ತಾಲೂಕಿನ ಚಿಕ್ಕಪಡಸಲಗಿಯ ದಿ.ಸಿದ್ದು ನ್ಯಾಮಗೌಡ ಶ್ರಮಬಿಂದು ಬ್ಯಾರೇಜ ವಿಕ್ಷಣೆ ನಂತರ ಸುದ್ದಿಗಾರೊಂದಿಗೆ ಮಾತನಾಡಿದ ಅವರು, ಪ್ರಸಕ್ತ ಕೊಯ್ನಾದಿಂದ 2.95ಲಕ್ಷ ಕ್ಯೂಸೆಕ್ ನೀರು ಬಿಡುಗಡೆ ಮಾಡಿದ್ದು, ಕೃಷಾನದಿಗೆ 2.70 ಲಕ್ಷ ಕ್ಯೂಸೆಕ್ ಒಳಹರಿವು ಇದ್ದು ಅದೇ ಪ್ರಮಾಣದಲ್ಲಿ ನೀರನ್ನು ಹೊರ ಹರಿದು ಬಿಡಲಾಗುತ್ತಿದ್ದು, 76 ಸಾವಿರ ಕ್ಯೂಸೆಕ್ ನೀರು ಆಲಮಟ್ಟಿಗೆ ತಲಪುತ್ತಿದೆ. ಜನ-ಜಾನುವಾರುಗಳಿಗೆ ಯಾವುದೇ ಹಾನಿಯಾಗದಂತೆ ಸುರಕ್ಷಾ ಕ್ರಮಗಳ ಸಹಿತ ಗಂಜಿ ಕೇಂದ್ರಗಳನ್ನು ಸ್ಥಾಪಿಸುವ ಕೆಲಸ ನಡೆಯುತ್ತಿದೆ ಎಂದರು.

ಮುತ್ತೂರ ನಡುಗಡ್ಡೆ ಜನರಿಗೆ ಸರಕಾರದಿಂದ ಶಾಶ್ವತ ಪರಿಹಾರ ಇಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು ರೈತರಿಗೆ ಬದುಲು ಕಟ್ಟಿಕೊಂಡು ಭಾವನೆಗಳೊಂದಿಗೆ ಜೀವನ ನಡೆಸುತ್ತಿರುವ ರೈತರಿಗೆ ಆರ್.ಸಿ.ಕೇಂದ್ರಗಳನ್ನು ನೀಡಿದರು ಕೂಡ ರೈತರು ತಮ್ಮ ಹಳೆ ನಡುಗಡ್ಡೆ ಜಾಗೆಯಲ್ಲಿ ಭಾವನೆಗಳೊಂದಿಗೆ ವಾಸಿಸುವ ಅವರಿಗೆ ಒತ್ತಾಯ ಮಾಡಲು ಬರುವುದಿಲ್ಲ. ಆರ್.ಸಿ. ಕೇಂದ್ರಗಳಲ್ಲಿ ಶಾಲೆ, ಚರಂಡಿ, ದೇವಸ್ಥಾನ ಸಹಿತ ಮೂಲಭೂತ ಸೌಕರ್ಯ ಕಲ್ಪಿಸಿದರು ಶೇ.40 ಜನರು ಸ್ಥಳಾಂತರಗೊಂಡಿಲ್ಲ ಎಂದರು.

ಆಲಗೂರದಲ್ಲಿ ಮೇವು ತರಲು ಹೋದ ರೈತ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದು ದುರ್ದೈವದ ಸಂಗತಿ, ಕಾರ್ಯಾಚರಣೆ ನಡೆದಿದ್ದು ಆತನ ಶವ ಪತ್ತೆಯಾಗಿಲ್ಲ. ಪ್ರವಾಹ ಬಂದಾಗ ನದಿ ತೀರಕ್ಕೆ ತೆರಳದಿರಿ ಎಂದು ಎಷ್ಟು ಎಚ್ಚರಿಕೆ ನೀಡಿದರು ಕಣ್ಣು ತಪ್ಪಿಸಿಕೊಂಡು ಹೋಗಿ ಅನಾಹುತ ಘಟನೆಗಳು ಜರಗುತ್ತಿವೆ. ಜನರು ಸುರಕ್ಷಿತ ಮತ್ತು ಜಾಗರೂಕರಾಗಿರಿ ಎಂದರು.

**ಪ್ರವಾಹ ಭೀತಿಯಿದೆ.....**

ಕೃಷ್ಣಾನದಿಗೆ ಕನಿಷ್ಠ 2 ಲಕ್ಷಗಿಂತ ಹೆಚ್ಚು ಕ್ಯೂಸೆಕ್ ನೀರು ಹರಿದು ಬಂದರೇ ತಾಲೂಕಿನ ಶಿರಗುಪ್ಪಿ, ಮೈಗೂರ, ಮುತ್ತೂರ, ಕಂಕಣವಾಡಿ, ಕಡಕೋಳ ಸಹಿತ 9 ಗ್ರಾಮಗಳು ಮುಳಗಡೆ ಭೀತಿ ಎದುರಿಸುವ ಮೂಲಕ 10ಕ್ಕೂ ಹೆಚ್ಚು ಸಂಪರ್ಕ ರಸ್ತೆಗಳ ಸಂಚಾರ ಕಡಿತಗೊಳ್ಳಲಿದೆ.

ಪ್ರವಾಹ ಭೀತಿ ಎದುರಿಸುತ್ತಿರುವ ಗ್ರಾಮದಲ್ಲಿ ಮುಂಜಾಗ್ರತೆ ಕ್ರಮಗಳನ್ನು ತಾಲೂಕಾಡಳಿತ ಕ್ರಮಗಳನ್ನು ಕೈಗೊಂಡಿದೆ ಎಂದರು.

–ಸದಾಶೀವ ಮಕ್ಕೊಜಿ, ತಹಶೀಲ್ದಾರ ಜಮಖಂಡಿ.

ಪ್ರವಾಹ ವಿಕ್ಷಣೆ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕೆ.ಎಂ.ಜಾನಕಿ, ಜಿಲ್ಲಾ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಜಿ.ಪಂ. ಸಿಇಓ ಶಶಿಧರ ಕುರೇರ, ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ, ತಹಶೀಲ್ದಾರ ಸದಾಶೀವ ಮಕ್ಕೊಜಿ, ತೌಫಿಕ ಪಾರತನಳ್ಳಿ ಸಹಿತ ಹಲವರು ಇದ್ದರು.

# ಪೊಲೀಸ್ ಠಾಣೆಯಲ್ಲಿ ಸಸಿ ಹಚ್ಚುವ ಕಾರ್ಯಕ್ರಮ

## ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿ



**ತೇರದಾಳ :** ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ ಆಗಿದೆ. ಆ ದಿಸೆಯಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ ಎಲ್ಲೆಡೆ ಸಸಿಗಳನ್ನು ಹಚ್ಚುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದು ಇಲ್ಲಿನ ಅಪರಾಧ ವಿಭಾಗದ ಪಿಎಸ್ಐ ಪಿ.ಬಿ. ಪೂಜಾರಿ ಹೇಳಿದರು.

ಧರ್ಮಸ್ಥಳ ಸಂಘದ ವತಿಯಿಂದ ಪೊಲೀಸ್ ಠಾಣೆ ಆವರಣದಲ್ಲಿ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಸಸಿ ನೆಟ್ಟು ಮಾತನಾಡಿದರು.

ಸಂಘ ಸಂಸ್ಥೆಗಳನ್ನು ಸ್ಥಾಪಿಸಿವುದು ಮುಖ್ಯವಲ್ಲ. ಸ್ಥಾಪಿಸಿದ ಸಂಘ ಸಂಸ್ಥೆಗಳಿಂದ ನಡೆಸುವ ಸಾಮಾಜಿಕ ಜವಾಬ್ದಾರಿ ಬಹಳ ಮುಖ್ಯ ಎಂದು ಹೇಳಿದರು. ಸಂಘದ ವಲಯ ಮೇಲ್ವಿಚಾರಕಿ ಮಹಾದೇವಿ ಪ್ರಾಸ್ತಾವಿಕವಾಗಿ ಮಾತನಾಡಿ ಸಂಸ್ಥೆಯ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಪೊಲೀಸ್ ಸಿಬ್ಬಂದಿ ಅಶೋಕ ಸವದಿ, ವಿವೇಕ ಸುವರ್ಣಖಂಡಿ, ಸಂಘದ ಕೃಷಿ ವಲಯ ಮೇಲ್ವಿಚಾರಕ ಚನ್ನಯ್ಯ ಹಿರೇಮಠ ಇದ್ದರು.

# ಕಾಲೇಜಿನಲ್ಲಿ ಕಾರ್ಗಿಲ್ ವಿಜೋತ್ಸವ: ನಿವೃತ್ತ ಯೋಧರ ಸನ್ಮಾನ

## ನಮ್ಮ ನಾಡ ರಕ್ಷಣೆಯಲ್ಲಿ ಯೋಧರ ತ್ಯಾಗ ಅವಿಸ್ಮರಣೀಯ: ಎಸ್.ಐ. ಕುಂದಗೋಳ




**ಮಹಾಲಿಂಗಪುರ :** ನಾಡಿನಲ್ಲಿ ನಾವು ಸುಖವಾಗಿ ನಿದ್ರೆ ಮಾಡಲು, ನೆಮ್ಮದಿಯಾಗಿ ಬಾಳ್ವೆ ಮಾಡಲು ಸಾಧ್ಯವಾಗುವುದು ಗಡಿಯಲ್ಲಿ ಯೋಧರು ಮಾಡುವ ತ್ಯಾಗದಿಂದ ಎಂದು ಕೆಎಲ್ಇ ಡಿಪ್ಲೋಮಾ ಕಾಲೇಜ್ ಪ್ರಾಚಾರ್ಯ ಎಸ್.ಐ. ಕುಂದಗೋಳ ಹೇಳಿದರು.

ಕಾಲೇಜಿನಲ್ಲಿ ಶುಕ್ರವಾರ ಜು.26ರಂದು ಹಮ್ಮಿಕೊಂಡಿದ್ದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ನಾಗರಿಕರಾದ ನಾವು ರೈತ ಸುರಿಸುವ ಬೆವರು ಮತ್ತು ಯೋಧ ಹರಿಸುವ ರಕ್ತಕ್ಕೆ ಋಣಿಯಾಗಿರಬೇಕು. ಜೈಜವಾನ್ ! ಜೈ ಕಿಸಾನ್ ! ಎಂಬ ಮಾತಿಗೆ ಬದ್ದರಾಗಿರಬೇಕು. ಕಾರ್ಗಿಲ್ ವಿಜಯದಲ್ಲಿ ಭಾಗಿಯಾದ ಯೋಧರ ಜೊತೆ ನಾವಿರುವುದೇ ಸೌಭಾಗ್ಯದ ಸಂಗತಿ ಎಂದರು.

ನಿವೃತ್ತ ಯೋಧ, ಕಾರ್ಗಿಲ್ ಯುದ್ಧದ ಗಾಯಾಳು ಶಿವಾನಂದ ಪರಪ್ಪನವರ ಮಾತನಾಡಿ, ಕಾರ್ಗಿಲ್ ಕದನದ ಕರಾಳ ದಿನಗಳನ್ನು ಮತ್ತು ವಿಜಯದ ವೀರೋತ್ಸಾಹದ ಕ್ಷಣಗಳನ್ನು ಕಣ್ಣಿಗೆ ಕಟ್ಟುವಂತೆ ಹಂಚಿಕೊಂಡರು. ರಾಷ್ಟ್ರಧ್ವಜ ಹಾರಾಡುತ್ತಿರುವುದು ಗಾಳಿಯಿಂದಲ್ಲ, ಯೋಧನ ಉಸಿರಿನಿಂದ ಎಂಬುದನ್ನು ಮಾರ್ಮಿಕವಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಸೈನಿಕರಾದ ಶಿವಾನಂದ ಪರಪ್ಪನವರ, ಹನಮಂತ ಕುರಿ, ಮಹಾಂತೇಶ ಮಿರ್ಜಿ, ಸಿದ್ರಾಮ ಹೊಸಮನಿ,ಐ.ಜಿ.ಚಿಂದಿ,ಬಿ.ಎಸ್. ಉದ್ದಪ್ಪಗೋಳ, ಮಹಾಂತೇಶ ಅಂಗಡಿ, ಮುರುಗೇಂದ್ರ ಗಾಡವಿ, ಮಹಾದೇವ ತೇಲಿ, ರವಿ ಕ್ಯಾತನ್ನವರ ಸೇರಿದಂತೆ ಹತ್ತಾರು ಯೋಧರನ್ನು ಸಾಮೂಹಿಕವಾಗಿ ಸನ್ಮಾನಿಸಿ ಸಲ್ಯೂಟ್ ಹೇಳಲಾಯಿತು.

ನಂತರ ವಿದ್ಯಾರ್ಥಿಗಳೆಲ್ಲರೂ ಮಾಜಿ ಸೈನಿಕರೊಂದಿಗೆ ಫೋಟೋ ಕ್ಲಿಕ್ಕಿಸಿಕೊಂಡು ಹೆಮ್ಮೆಪಟ್ಟರು. ಭೋಲೋ ಭಾರತ್ ಮಾತಾಕಿಜೈ ಎಂಬ ಜಯಘೋಷ ಮೊಳಗಿತು. ವಿದ್ಯಾರ್ಥಿನಿಯರು ಭಾವಚಿತ್ರ ತೆಗೆಸಿಕೊಳ್ಳುವಾಗ ನೀವೂ ಆರ್ಮಿಗೆ ಸೇರಬಹುದು ಎಂದು ಯೋಧರೊಬ್ಬರು ಸಲಹೆ ನೀಡಿದರು. ಅಷ್ಟರಲ್ಲೇ ಶಿವಲಿಂಗ ಸಿದ್ನಾಳ ಮುಂದುವರೆದು ಹುಡುಗಿಯರು ಸೈನ್ಯ ಸೇರಲು ಸಾಧ್ಯವಾಗದಿದ್ದರೂ ಕಡೆಯಪಕ್ಷ ಸೈನಿಕನನ್ನು ಮದುವೆಯಾಗುವ ಔದಾರ್ಯವನ್ನಾದರೂ ತೋರಬೇಕು ಎಂದು ಮನವಿ ಮಾಡಿದರು.

ಸಾಂಸ್ಕೃತಿ ವಿಭಾಗದ ಮುಖ್ಯಸ್ಥೆ ಮಹಾದೇವಿ ಅಂಬಿ, ಗುರುರಾಜ ಅಥಣಿ, ಉಮೇಶ ಹಾದಿಮನಿ, ಸುಭಾಸ್ ಮೂಶಿ, ವಿಶಾಲ್ ಮೆಟಗುಡ, ಅಮೀತ ಜಾಧವ, ಮಂಜುನಾಥ ಅರಕೇರಿ, ವಂದನಾ ಪಸಾರ, ಸವಿತಾ ಗೊಂದಿ, ಚೈತ್ರಾ ಹುದ್ದಾರ, ಅಂಜನಾ ಮಾಲಜ, ಸವಿತಾ ಬೀಳಗಿ, ನಿರ್ಮಲಾ ಫಕೀರಪುರ, ಲಕ್ಷ್ಮೀ ಅಂಗಡಿ, ಸಾಕ್ಷಿ ಕೋರಿಶೆಟ್ಟಿ ಸೇರಿದಂತೆ ಹಲವರು ಇದ್ದರು.

# ಶೇರುದಾರರಿಗೆ ಶೇ.8ರಷ್ಟು ಲಾಭಾಂಶ ವಿತರಣೆ: ರಾಹುಲ




**ಜಮಖಂಡಿ :** ಪಾರದರ್ಶಕ ಸೇವೆಯೊಂದಿಗೆ ನಮ್ಮ ಬ್ಯಾಂಕ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಕಳೆದ ಹಣಕಾಸುವ ವರ್ಷದಲ್ಲಿ ಗರಿಷ್ಠ ಲಾಭಾಂಶ ಹೊಂದಿದ್ದು ಪ್ರತಿ ಶೇರುದಾರರಿಗೆ ಶೇ.8 ರಷ್ಟು ಲಾಭಾಂಶ ನೀಡಲು ನಿರ್ಧರಿಸಿದೆ ಎಂದು ಅರ್ಬನ್ ಬ್ಯಾಂಕ್ನ ಅಧ್ಯಕ್ ರಾಹುಲ್ ಕಲೂತಿ ಹೇಳಿದರು.

ನಗರದ ಬಸವಭವನ ಸಭಾಭವನದಲ್ಲಿ ಅರ್ಬನ್ ಕೊ. ಆಪರೇಟಿವ್ ಬ್ಯಾಂಕಿನ 84 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು., ಅರ್ಬನ್ ಕೊ. ಆಪರೇಟಿವ್ ಬ್ಯಾಂಕ್ ಪ್ರಸಕ್ತ ಸಾಲಿನಲ್ಲಿ 525.12 ಕೋಟಿ ವಹಿವಾಟು ನಡೆಸುವ ಮೂಲಕ ಅಭಿವೃದ್ಧಿ ವೇಗ ಹೆಚ್ಚಿಸಿಕೊಂಡಿದೆ ಎಂದರು.

ಕಳೆದ ವರ್ಷಕ್ಕೆ ಹೋಲಿಸಿದರೆ ಬ್ಯಾಂಕ್ 46.34 ಕೋಟಿಯಷ್ಟು ಹೆಚ್ಚಿನ ವಹಿವಾಟು ನಡೆಸಿದೆ. 22924 ಸದಸ್ಯರು ಹಾಗೂ 35.81 ಕೋಟಿ ಸ್ವಂತ ಬಂಡವಾಳ ಹೊಂದಿದೆ. ಬ್ಯಾಂಕ ಠೇವಣಿ 314.16 ಕೋಟಿಯಿದ್ದು ಗ್ರಾಹಕರ ಸಂಖ್ಯೆ 34056ಕ್ಕೆ ಏರಿಕೆಯಾಗಿದೆ.

ಹಿಂದುಳಿದ ವರ್ಗದ ಇಬ್ಬರು, ಇಬ್ಬರು ಮಹಿಳಾ ನಿರ್ದೇಶಕರು, ಪ.ಜಾತಿ. ಪ.ಗಂಗಡದ ತಲಾ ಒಬ್ಬರಂತೆ ಒಟ್ಟು 17 ಜನ ಚುನಾಯಿತ ಸದಸ್ಯರನ್ನು ಹೊಂದಿದೆ ಎಂದರು.

ಕಳೆದ ವರ್ಷದಲ್ಲಿ ಅಗಲಿದ ಬ್ಯಾಂಕ ಸದಸ್ಯರು, ಸಿಬ್ಬಂದಿ, ಠೇವುದಾರರು ಮತ್ತು ವೀರಯೋಧರನ್ನು ಸ್ಮರಿಸುವ ಮೂಲಕ ಸಂತಾಪ ಸೂಚಿಸಲಾಯಿತು. ಬ್ಯಾಂಕ ವ್ಯವಹಾರಗಳನ್ನು ಡಿಜಿಟಲೀಕರಣಗೊಳಿಸುವ ನಿಟ್ಟಿನಲ್ಲಿ ಮುಂಚೂಣಿಯಲ್ಲಿದ್ದು ಎಟಿಎಂ ಸೇವೆಗಳು ಪ್ರಾರಂಭವಾಗಿದ್ದರಿಂದ ಗ್ರಾಹಕರ ಮೆಚ್ಚುಗೆ ಗಳಿಸಿದೆ. 2024-25ನೇಯ ಸಾಲಿನಲ್ಲಿ 660 ಕೋಟಿ ವಹಿವಾಟಿನ ಗುರಿ ಹೊಂದಿದೆ. ಇದರಲ್ಲಿ 400 ಕೋಟಿ ಠೇವಣಿ ಹಾಗೂ 260 ಕೋಟಿ ಮುಂಗಡ ಹೂಡಿಕೆ ಸೇರಿದೆ. ಶೇ.65 ಸಿಡಿ ಅನುಪಾತದೊಂದಿಗೆ ವಹಿವಾಟಿನಲ್ಲಿ ಶೇ.16.81 ಪ್ರಗತಿ ಸಾಧಿಸುವ ಗುರಿ ಹಾಕಿಕೊಳ್ಳಲಾಗಿದೆ ಎಂದರು.

ವೇದಿಕೆಯಲ್ಲಿ ಉಪಾಧ್ಯಕ್ಷ ಎಂ.ಎಂ. ಪಾರತನಳ್ಳಿ, ನಿರ್ದೇಶಕರಾದ ಎನ್.ಎಂ.ಶಹಾ, ಜಿ.ಎಸ್.ನ್ಯಾಮಗೌಡ, ಎಫ್.ಎ. ಬಾಗವಾನ, ಕೆ.ಜಿ.ಮಾಳಿ, ವಿ.ಐ.ಕಂಬಿ, ಎ.ಬಿ.ಮನಗೂಳಿ, ಎ.ಆರ್.ಸಿಂಧೆ, ಡಿ.ಆರ್. ತೇಲಿ, ಬಸವರಾಜ ಕಲೂತಿ. ಬಿ.ಜಿ.ಮಠಪತಿ, ಕಿರಣ ಪಿಸಾಳ, ಪಿ.ಡಿ.ಜನವಾಡ, ಎನ್.ಬಿ. ತಳವಾರ, ವಿ.ಎ. ಗೊಂದಿ, ಎಸ್.ಪಿ.ಅರಕೇರಿ, ಜಿ.ಬಿ.ಬಾಂಗಿ, ಆರ್.ಎಸ್.ಕನಕೇರಿ, ಪ್ರಧಾನ ವ್ಯವಸ್ಥಾಪಕ ಎಸ್.ಆರ್. ತುಪ್ಪದ, ಸಹಾಯಕವ್ಯವಸ್ಥಾಪಕ ಎಸ್,ಎಸ್. ಹಲ್ಯಾಳ ಸಹಿತ ಹಲವರು ಇದ್ದರು.

# ನಿಲ್ಲದ ಕೃಷ್ಣೆಯ ರುದ್ರ ನರ್ತನ

## ಹಳಿಂಗಳಿಯಲ್ಲಿ 40 ಕುಟುಂಬಗಳು ಸ್ಥಳಾಂತರ

**ತೇರದಾಳ :** ಕೃಷ್ಣಾ ನದಿಯಲ್ಲಿ ನೀರಿನ ಮಟ್ಟ ದಿನೇ ದಿನೆ ಹೆಚ್ಚಾಗುತ್ತಿರುವುದರಿಂದ ಹಳಿಂಗಳಿ ಗ್ರಾಮದ ಗುಳ್ಳಿಮಳ್ಳಿಯಲ್ಲಿನ 40 ಕುಟುಂಬಗಳು ಜಾನುವಾರಗಳೊಂದಿಗೆ ಸ್ಥಳಾಂತರಗೊಂಡಿದ್ದು, ಇವರಲ್ಲಿ 15 ಕುಟುಂಬಗಳು ಗ್ರಾಮದ ಮಹಾವೀರ ಶಾಲೆಯಲ್ಲಿನ ಕಾಳಜಿ ಕೇಂದ್ರದಲ್ಲಿ ಆಸರೆ ಪಡೆದಿದ್ದಾರೆ. ಇನ್ನೂಳಿದವರು ಗ್ರಾಮದಲ್ಲಿನ ತಮ್ಮ ಮನೆಗಳಿಗೆ ಸಂಬಂಧಿಕರ ಮನೆಗಳಿಗೆ ತೆರಳಿದ್ದಾರೆ. ಏತನ್ಮಧ್ಯೆ ಕೃಷ್ಣಾ ನದಿ ದಡದಲ್ಲಿರುವ ತೇರದಾಳ ಜಾಕವೆಲ್ ರಸ್ತೆ ಸಂಪೂರ್ಣ ಜಲಾವೃತಗೊಂಡಿದ್ದು, ಜಾಕವೆಲ್‌ಗೆ ಹೋಗುವ ಮಾರ್ಗ ಕಡಿತಗೊಂಡಿದೆ. ಅಕ್ಕ-ಪಕ್ಕದ ಜಮೀನುಗಳಿಗೆ ನೀರು ನುಗ್ಗಿದ್ದು, ಬೆಳೆಗಳು ನೀರಲ್ಲಿ ಮುಳಗಿವೆ. ನಮ್ಮ ಭಾಗದಲ್ಲಿ ಮಳೆ ಕಡಿಮೆ ಆಗಿದೆ. ಆದರೆ ಎಲ್ಲಿಯೋ ಮಳೆ ಆದರೆ ನಾವು ಸಂತ್ರಸ್ತರಾಗುವುದು ಇದೆಂಥಾ ನಮ್ಮ ಸ್ಥಿತಿ ಎಂದು ಸಂತ್ರಸ್ತರು ಅಳಲು ತೋಡಿಕೊಳ್ಳುತ್ತಿದ್ದಾರೆ.



# ರೈತರು ತಾಂತ್ರಿಕತೆ ಅಳವಡಿಸಿಕೊಳ್ಳಬೇಕು: ಪಟ್ಟಿಹಾಳ



**ಜಮಖಂಡಿ :** ಆತ್ಮ ಯೋಜನೆ ಮಹಿಳಾ ಮತ್ತು ಪುರುಷ ಸಂಘಗಳ ಸದಸ್ಯರಿಗೆ ಆಧುನಿಕ ಕೃಷಿಪದ್ಧತಿಗಳ ಕುರಿತು ತರಬೇತಿ, ಪ್ರವಾಸ ಹಾಗೂ ಪ್ರಾತ್ಯಕ್ಷಿಕೆಗಳ ಮೂಲಕ ಕೃಷಿಜ್ಞಾನ ನೀಡಿ ಉತ್ತಮ ಕೃಷಿಕರಾಗುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಎಸ್.ಬಿ.ಪಟ್ಟಿಹಾಳ ಹೇಳಿದರು.

ನಗರದಲ್ಲಿ ನಡೆದ 2024-25ನೇ ಸಾಲಿನ ಆತ್ಮ ಯೋಜನೆಯ ತಾಲೂಕ ರೈತಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಈ ಯೋಜನೆಯಿಂದ ರಾಜ್ಯದಲ್ಲಿ ಬಹಳಷ್ಟು ರೈತರಿಗೆ ಅನುಕೂಲವಾಗಿದ್ದು, ಪ್ರಗತಿಪರ ರೈತರು ಹಾಗೂ ಪ್ರಶಸ್ತಿ ವಿಜೇತ ರೈತರು ತಾವು ಅಳವಡಿಸಿಕೊಂಡಿರುವ ಉತ್ತಮ ಕೃಷಿ ತಂತ್ರಜ್ಞಾನಗಳನ್ನು ಇತರೆ ರೈತರು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ತಾಂತ್ರಿಕತೆ ಪಸರಿಸುವ ಕಾರ್ಯದಲ್ಲಿ ನಿರತರಾಗಬೇಕಿದೆ. ಇಲಾಖೆಯಲ್ಲಿ ದೊರೆಯುವ ಎಲ್ಲ ಯೋಜನೆಗಳು ತಳಮಟ್ಟದ ರೈತರಿಗೆ ತಲುಪವಲ್ಲಿ ಹೆಚ್ಚಿನ ಕಾಳಜಿ ವಹಿಸುತ್ತಿದೆ. ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಪ್ರಾರಂಭವಾಗಿದ್ದು, ಎಲ್ಲ ರೈತರು ಯೋಜನೆ ಲಾಭ ಪಡೆದುಕೊಳ್ಳ ಬೇಕೆಂದರು.

ಪಶು ಸಂಗೋಪನೆ ಇಲಾಖೆ ಪಶು ವೈದ್ಯಾಧಿಕಾರಿ ಪ್ರಕಾಶ ಗೂಳಪ್ಪಗೋಳ ಮಾತನಾಡಿ, ಇಲಾಖೆ ಯೋಜನೆಗಳ ಬಗ್ಗೆ, ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆ ಅಡಿಯಲ್ಲಿ ಉದ್ಯಮಶೀಲತೆ ಅಭಿವೃದ್ಧಿ, ರೈತರನ್ನು ಉದಯೋನ್ಮುಖ ಉದ್ಯಮಿಗಳನ್ನಾಗಿ ಪರಿವರ್ತಿಸುವ ಉದ್ದೇಶದ ಜೊತೆಗೆ ಉತ್ತಮಗುಣಮಟ್ಟದ ಮೌಲ್ಯಾವರ್ಧಿತ ಜಾನುವಾರು ಉತ್ಪನ್ನಗಳನ್ನು ಗ್ರಾಹಕರಿಗೆ ನೀಡುವುದು ಇಲಾಖೆ ಮುಖ್ಯ ಉದ್ದೇಶವಾಗಿದೆ ಎಂದರು.

ರೈತ ಸಂಪರ್ಕ ಕೇಂದ್ರದ ಅಧಿಕಾರಿ ಆರ್. ಎನ್.ತುಳಸಿಗೇರಿ, ಸಹಾಯಕ ತೋಟಗಾರಿಕಾ ನಿರ್ದೇಶಕ ಪ್ರವೀಣ ಗಾಣಿಗೇರ, ಶೇಖರ ಮಾನೋಜಿ, ಪರಗೌಡ ಶೇಗುಣಸಿ, ಸಂಗೀತಾ ಕಾಂತಿ, ಕೃಷಿ ಅಧಿಕಾರಿ ಎಸ್.ಎಂ.ಬಿರಾದಾರ, ಶಂಕರ ಪವಾರ, ಸಮಿತಿ ಸದಸ್ಯ ರವಿಕುಮಾರ, ಜೀವನಸಾಬ, ಹಣಮಂತ ಬುಗಟಿ, ಪರಪ್ಪ ಮಾಲಗಾಂವಿ, ಪರಮಾನಂದ ಹಳ್ಳಿ, ಖಂಡೂಬಾ ನನ್ನವರೆ, ಮಹಾದೇವಿ ಯಾಬಾಣಿ ಹಾಗೂ ಎ.ಟಿ.ಎಂ ನಜೀರ ಜಮಖಂಡಿ, ಕೆ.ಎ.ಜಮಖಂಡಿ, ಪ್ರವೀಣ ಕೊಪ್ಪದ ಸಹಿತ ಹಲವರು ಇದ್ದರು.

# ತಮದಡ್ಡಿಗೆ ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಭೇಟಿ

## ಸರಕಾರದ ಮೇಲೆ ಒತ್ತಡ ಹೇರಲಾಗುವುದು: ಉಮಾಶ್ರೀ





**ತೇರದಾಳ :** ತಮದಡ್ಡಿ ಗ್ರಾಮದ ಸ್ಥಳಾಂತರಕ್ಕೆ ತಮ್ಮ ಅಧಿಕಾರವಧಿಯಲ್ಲಿಯೇ 89 ಎಕರೆ ಜಾಗ ನೀಡಲಾಗಿದೆ. ಸ್ಥಳಾಂತರಕ್ಕೆ ತಕರಾರುದಿಂದಾಗಿ ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಸಮಸ್ಯೆಯನ್ನು ಶೀಘ್ರದಲ್ಲಿ ಇತ್ಯರ್ಥಗೊಳಿಸಿ ತಮದಡ್ಡಿ ಗ್ರಾಮಸ್ಥರಿಗೆ ಪುನರ್ ವಸತಿ ಜಾಗ ನೀಡುವ ಕ್ರಮ ಕೈಗೊಳ್ಳಲು ಸರಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ವಿಧಾನ ಪರಿಷತ್ ಸದಸ್ಯೆ ಮಾಜಿ ಸಚಿವೆ ಉಮಾಶ್ರೀ ಹೇಳಿದರು.

ಭಾನುವಾರ ತಮದಡ್ಡಿ ಗ್ರಾಮಕ್ಕೆ ಬೇಟಿ ನೀಡಿದ ಅವರು, ಕೃಷ್ಣಾ ನದಿಯಲ್ಲಿನ ನೀರಿನ ಮಟ್ಟ ಪರಿಶೀಲಿಸಿ ಗ್ರಾಮಸ್ಥರೊಂದಿಗೆ ಪ್ರವಾಹ ಕುರಿತು ಮಾಹಿತಿ ಪಡೆದುಕೊಂಡರು.

ಪ್ರವಾಹ ಎದುರಿಸಲು ಸರಕಾರ ಬದ್ಧ ಇದೆ. ಈಗಾಗಲೇ ಎಲ್ಲ ಇಲಾಖೆ ಅಧಿಕಾರಿಗಳಿಗೆ ಸೂಚನೆಯನ್ನು ಕೂಡ ನೀಡಲಾಗಿದ್ದು, ನೇಮಕಗೊಂಡ ಅಧಿಕಾರಿಗಳು ಗ್ರಾಮದಲ್ಲಿಯೇ ಇದ್ದುಕೊಂಡು ಗ್ರಾಮಸ್ಥರಿಗೆ ಯಾವುದೇ ತೊಂದರೆ ಆಗದಂತೆ ಎಚ್ಚರ ವಹಿಸಬೇಕು. ಡೆಂಗೆ ಬಾರದಂತೆ ಆರೋಗ್ಯ ಇಲಾಖೆಯವರು ಗ್ರಾಪಂ ಅಧಿಕಾರಿಗಳು ಪಾಗಿಂಗ್ ಸಿಂಪಡಿಸಬೇಕೆಂದು ಸೂಚನೆ ನೀಡಿದರು. ತಹಸೀಲ್ದಾರ್ ವಿಜಯ ಕುಮಾರ ಕಡಕೋಳ, ನೋಡಲ್ ಅಧಿಕಾರಿ ಆನಂದ ಕೆಸರಗೊಪ್ಪ, ಪಿಎಸ್ಐ ಅಪ್ಪಣ್ಣ ಐಗಳಿ, ಗ್ರಾಮಲೆಕ್ಕಾಧಿಕಾರಿ ರೇವಣಸಿದ್ದ ಕಮತೆ, ಪಿಡಿಒ, ಮುಖಂಡರಾದ ಸುಕಮಾರಗೌಡ ಪಾಟೀಲ, ಶಿರಗಾರ ಮತ್ತಿತರಿದ್ದರು.

# ಪ್ರವಾಹ ಭೀತಿ ಹುಟ್ಟಿಸಿದ ಕೃಷ್ಣೆ....!

## ಎರಡು ದಶಕಗಳು ಕಳೆದರೂ ಸಿಗದ ಪುರ್ನವಸತಿ | ಪ್ರತಿ ವರ್ಷ ಸಮಸ್ಯೆಯಲ್ಲಿಯೇ ಜೀವನ ಸಾಗಿಸುತ್ತಿರುವ ತಮದಡ್ಡಿ ಮತ್ತು ಅಸ್ಕಿ ಗ್ರಾಮಸ್ಥರು







* ಕಿರಣ ಶ್ರೀಶೈಲ ಆಳಗಿ

**ರಬಕವಿ-ಬನಹಟ್ಟಿ :** ಮಹಾರಾಷ್ಟ್ರದ ಜಲಾನಯನ ಪ್ರದೇಶಗಳಲ್ಲಿ ಭಾರೀ ಪ್ರಮಾಣದ ಮಳೆ ಹಾಗೂ ಮಹಾರಾಷ್ಟ್ರದ ಇತರೆ ಜಲಾಶಯಗಳಿಂದ ಅಪಾರ ಪ್ರಮಾಣದ ನೀರನ್ನು ಹೊರ ಹಾಕುತ್ತಿರುವುದರಿಂದ ತಾಲೂಕಿನ ಕೆಲವು ಗ್ರಾಮಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿವೆ.

ಕೃಷ್ಣಾ ನದಿ ಪಾತ್ರದ ಗ್ರಾಮಗಳಾದ ತಮದಡ್ಡಿ, ಹಳಿಂಗಳಿ (ಗುಳ್ಳಿಮನೆ), ಮದನಮಟ್ಟಿ, ಆಸಂಗಿ, ಅಸ್ಕಿ, ಕುಲಹಳ್ಳಿ ಹಾಗೂ ಹಿಪ್ಪರಗಿ ಗ್ರಾಮದ ಸುತ್ತಮುತ್ತಲಿನ ನದಿ ತೀರದ ರೈತರಲ್ಲಿ ಮಳೆಗಾಲ ಆರಂಭಗೊಂಡರೆ ಒಂದೆಡೆ ಖುಷಿ ಇನ್ನೊಂದೆಡೆ ಆತಂಕದ ನಡುವೆ ಜೀವನ ಸಾಗಿಸಬೇಕಾದ ಅನಿವಾರ್ಯತೆ ನಿರಂತರವಾಗಿದೆ. ಕೃಷ್ಣಾನದಿ ಉಕ್ಕಿ ಹರಿದು ನೀರಿನ ಪ್ರವಾಹ ಹೆಚ್ಚಾದಾಗ ಆತಂಕ ಸೃಷ್ಟಿ ಮಾಡಿ ರೈತರು ಮತ್ತು ಸಾರ್ವಜನಿಕರನ್ನು ಭಾಗಶಃ ಕಾಡುತ್ತಿರುವುದಂತೂ ವಾಸ್ತವ.

2005, 2009 ಮತ್ತು 2019 ರಲ್ಲಿ ಉಂಟಾಗಿದ್ದ ಪ್ರವಾಹದ ರುದ್ರ ನರ್ತನವನ್ನು ಇಲ್ಲಿಯ ಗ್ರಾಮಸ್ಥರು ಇಂದಿಗೂ ಮರೆತಿಲ್ಲ. 2005 ರಲ್ಲಿ ಉಂಟಾದ ಪ್ರವಾಹ ಈ ಭಾಗದ ಮನೆ, ಬೆಳೆ, ಕೋಟ್ಯಾಂತರ ಮೊತ್ತದ ಆಸ್ತಿ-ಪಾಸ್ತಿ ಕೊಚ್ಚಿಕೊಂಡು ಹೋಗುವಂತೆ ಮಾಡಿತ್ತು. ಪ್ರವಾಹಕ್ಕೆ ತುತ್ತಾಗಿದ್ದ ಹಳ್ಳಿಗರಿಗೆ ಅಂದು ರಾಜ್ಯ ಸರಕಾರ, ಹಲವಾರು ಸಂಘ-ಸಂಸ್ಥೆಗಳ, ದಾನಿಗಳ ನೆರವಿಗೂ ಮನವಿ ಮಾಡಿತ್ತು. ಅದರ ಫಲವಾಗಿ ಹಲವಾರು ಸಂಸ್ಥೆಗಳು ಜಿಲ್ಲಾಡಳಿತ ಪ್ರವಾಹಕ್ಕೆ ಸಿಲುಕಿ ನಲುಗಿದವರಿಗೆ ಆಹಾರ ಪೊಟ್ಟಣ, ಶಾಲು, ಜಮಖಾನೆ, ಕುಡಿಯುವ ನೀರು, ಶೆಡ್ನಲ್ಲಿ ಆಶ್ರಯ ಕಲ್ಪಿಸಲಾಗಿತ್ತು. ಆಗ ಉಂಟಾದ ನಷ್ಟಪರಿಹಾರದ ಜೊತೆ ಮುಳುಗಡೆ ಪ್ರದೇಶಗಳನ್ನು ಗುರುತಿಸಿ ಪರಿಹಾರ ಧನ ಕೂಡಾ ನೀಡಿತ್ತು. ಇಲ್ಲಿನ ಬಹುತೇಕ ಗ್ರಾಮಗಳ ಜನರ ಜಮೀನುಗಳು ಮುಳುಗಡೆ ವ್ಯಾಪ್ತಿಯಲ್ಲಿ ಬರುತ್ತಿದ್ದು,ಆಶ್ರಯವಿಷಯಕ್ಕೆಸಂಬಂಧಿಸಿದಂತೆ ಅಸ್ಕಿ ಹಾಗೂ ತಮದಡ್ಡಿ ಗ್ರಾಮಸ್ಥರ ತಕರಾರು ಸರಕಾರದ ಜೊತೆ ಮುಂದುವರೆದಿದೆ. ಅಸ್ಕಿ ಗ್ರಾಮಕ್ಕೆ ಸಂಬಂಧಿಸಿದಂತೆ ಹಲವಾರು ಪ್ರದೇಶಗಳನ್ನು ಗುರುತಿಸಿದ್ದರೂ ಕೂಡ ಸಮಸ್ಯೆ ನಿವಾರಣೆಯಾಗಿಲ್ಲ. ಇದೀಗ ಅರಣ್ಯ ಇಲಾಖೆ ಜಾಗೆ ತೋರಿಸಿದ್ದು , ಸರಕಾರ ಮಟ್ಟದಲ್ಲಿ ಕಂದಾಯಭೂಮಿಹಸ್ತಾಂತರಿಸಿಅರಣ್ಯಭೂಮಿ ಪಡೆದುಕೊಳ್ಳುವಪ್ರಕ್ರಿಯೆಸರಕಾರಮಟ್ಟದಲ್ಲಿದೆ. ಅದೇ ರೀತಿ ಸಂಪೂರ್ಣ ಮುಳಗಡೆಯಾಗುವ ತಮದಡ್ಡಿ ಗ್ರಾಮಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಳಿಂಗಳಿ ಗ್ರಾಮದ ಗುಡ್ಡದಲ್ಲಿ ಸುಮಾರು 89 ಎಕರೆ ಕಂದಾಯ ಭೂಮಿ ನೀಡಲಾಗಿದೆ. ಆದರೆ ಹಳಿಂಗಳಿ ಗ್ರಾಮಸ್ಥರು ಅದು ಪ್ರಾಚೀನ ಇತಿಹಾಸದ ಕುರುಹುಗಳಿರುವ ಜಾಗೆ ಅದನ್ನು ಅವರಿಗೆ ಬಿಟ್ಟು ಕೊಡಬೇಡಿ ಎಂದು ನ್ಯಾಯಾಲಯದ ತಡೆಯಾಜ್ಞೆಯನ್ನು ತಂದಿರುವುದರಿಂದ ಅದು ನೆನೆಗುದಿಗೆ ಬಿದ್ದಿದೆ.

**ನಿನ್ನೆ ಜುಲೈ 29 ರಂದು**

ಕೃಷ್ಣಾ ನದಿಗೆ 2,77,820 ಕ್ಯೂಸೆಕ್ ನೀರು ಹರಿದು ಬಂದಿದ್ದು ಮತ್ತಷ್ಟು ಪ್ರವಾಹದ ಭೀತಿ ಗ್ರಾಮಸ್ಥರಲ್ಲಿ ಆವರಿಸಿದೆ. ಆಸಂಗಿ ಗ್ರಾಮ ಪಂಚಾಯತಿವ್ಯಾಪ್ತಿಗೆಬರುವಅಸ್ಕಿಗ್ರಾಮಕೃಷ್ಣಾ ನದಿತೀರದಗ್ರಾಮವಾಗಿದ್ದುಗ್ರಾಮದತೋಟದ ವಸತಿಯಲ್ಲಿನ ಹಲವಾರು ಕುಟುಂಬಗಳ ತೋಟದ ಪ್ರದೇಶ ಜಲಾವೃತವಾಗಿದ್ದು, ನೀರು ಗ್ರಾಮವನ್ನುಸುತ್ತುವರೆಯುತ್ತಿದ್ದು,ಆದಿಶೆಯಲ್ಲಿ ಸರಕಾರಿ ಅಧಿಕಾರಿಗಳು ಅವರ ಮನವೊಲಿಸಿ ಅವರನ್ನು ಹಾಗೂ ಜಾನವಾರುಗಳನ್ನು ಗ್ರಾಮದ ಮನೆಗಳಿಗೆ ಹಾಗೂ ತಮ್ಮ ಸಂಬಂಧಿಕರ ಮನೆಗಳಿಗೆ ಸ್ಥಳಾಂತರಿಸಿದ್ದಾರೆ. ಹಾಗೂ ಗಂಜಿ ಕೇಂದ್ರವನ್ನು ಪ್ರಾರಂಭಿಸಿದ್ದಾರೆ. ಹಳಿಂಗಳಿ ತೋಟದ ಮನೆಯ ಹತ್ತಿರ ಪ್ರವಾಹ ಬಾಧಿತವಾಗಿರುವ ಪ್ರದೇಶದಲ್ಲಿನ 40 ಕುಟುಂಬ 175 ಜನ, 208 ಜಾನುವಾರುಗಳನ್ನು ಸ್ಥಳಾಂತರಿಸಿದ್ದು , ಹಳಿಂಗಳಿಯ ಮಹಾವೀರ ಪ್ರಾಥಮಿಕ ಶಾಲೆಯಲ್ಲಿ ಕಾಳಜಿ ಕೇಂದ್ರ ಸ್ಥಾಪಿಸಿ ಅದರಲ್ಲಿ 15 ಕುಟುಂಬಗಳ 74 ಜನರು ಆಶ್ರಯ ಪಡೆದುಕೊಂಡಿದ್ದಾರೆ. ಉಳಿದ ಕುಟುಂಬಗಳು ಸಮೀಪದ ಸಂಬಂಧಿಕರ ಮನೆ ಹಾಗೂ ಸ್ವಂತ ಮನೆಗಳಲ್ಲಿ ವಸತಿ ಪಡೆದಿದ್ದಾರೆ. ಸುಮಾರು ಐದು ಸಾವಿರ ಜನಸಂಖ್ಯೆಯ ತಮದಡ್ಡಿಯ 1,100 ಕುಟುಂಬಗಳು ವಾಸವಿದ್ದಾರೆ. ಸಧ್ಯ ತಮದಡ್ಡಿಯ ಸರಕಾರಿ ಪ್ರೌಢಶಾಲೆಯಲ್ಲಿ ಕಾಳಜಿ ಕೇಂದ್ರ ಆರಂಭಿಸಿದ್ದು, ನದಿ ಪಾತ್ರದಲ್ಲಿರುವ ಆರು ಕುಟುಂಬಗಳ 20 ಜನ ಮತ್ತು 78 ಜಾನುವಾರುಗಳು ಆಶ್ರಯ ಪಡೆದುಕೊಂಡಿದ್ದಾರೆ. ನೀರಿನ ತೀವ್ರತೆ ಇನ್ನೂ ಹೆಚ್ಚಾದಲ್ಲಿ ಆದಷ್ಟು ಬೇಗನೆ ಗಂಜಿ ಕೇಂದ್ರ ತೆರೆಯಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿರುವುದಾಗಿ ಅಧಿಕಾರಿಗಳು ಹೇಳುತ್ತಾರೆ.

> ಮಹಾರಾಷ್ಟ್ರದಕೃಷ್ಣಾಜಲಾನಯನಪ್ರದೇಶಗಳಲ್ಲಿ ಮಳೆಯಾಗುತ್ತಿದ್ದು, ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಅಗತ್ಯವಿದ್ದೆಡೆ ಕಾಳಜಿ ಕೇಂದ್ರವನ್ನು ತೆರೆಯಲಾಗಿದ್ದು , ನದಿ ಪಾತ್ರದ ಜನರು ಜಾಗ್ರತರಾಗಿರಬೇಕು. ತಾಲೂಕು ಆಡಳಿತ ಸದಾ ತಮ್ಮ ಜೊತೆಗೆ ಇರುತ್ತದೆ .
>
> । ಗಿರೀಶ ಸ್ವಾದಿ **ತಹಶೀಲ್ದಾರರು, ರಬಕವಿ-ಬನಹಟ್ಟಿ.**

**ಮುಳುಗಡೆ :** ರಬಕವಿ-ಬನಹಟ್ಟಿ ಸಮೀಪದ ಜಾಕವೆಲ್ ರಸ್ತೆ, ಮದನಮಟ್ಟಿ ರಸ್ತೆಯ ಸೇತುವೆ ಮೇಲೆ ನೀರು ಬಂದಿದ್ದರಿಂದ ಮದನಮಟ್ಟಿಯ ಗುಡ್ಡದಲ್ಲಿರುವ ಸರಕಾರಿ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗಿದೆ. ಅಲ್ಲದೆ ಕುಲಹಳ್ಳಿಯಿಂದ ಹಿಪ್ಪರಗಿಗೆ ತೆರಳುವ ರಸ್ತೆ ಹಿನ್ನೀರಿನಿಂದ ಜಲಾವೃತವಾಗಿದ್ದು ರಸ್ತೆ ಸಂಚಾರಕ್ಕೆ ತೊಂದರೆಯಾಗಿದೆ.

> ಅಸ್ಕಿಗ್ರಾಮಕ್ಕೆಸಂಬಂಧಿಸಿದಂತೆಅರಣ್ಯ ಇಲಾಖೆ ಜಾಗೆ ತೋರಿಸಿದ್ದು , ಸರಕಾರದ ಮಟ್ಟದಲ್ಲಿ ರೆವ್ಹಿನ್ಯೂಲ್ಯಾಂಡಹಸ್ತಾಂತರಿಸಿಪಡೆದುಕೊಳ್ಳುವ ಪ್ರಕ್ರಿಯೆ ಸರಕಾರ ಮಟ್ಟದಲ್ಲಿದ್ದು ಆದಷ್ಟು ಬೇಗನೆ ಪೂರ್ಣ ಗೊಳಿಸಲು ಸರಕಾರದ ಮೇಲೆ ಒತ್ತಡ ಹಾಕಲಾಗುವುದು. ಅದೇ ರೀತಿ ತಮದಡ್ಡಿ ಗ್ರಾಮಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಳಿಂಗಳಿ ಗ್ರಾಮದ ಗುಡ್ಡದಲ್ಲಿ ಸುಮಾರು 89 ಎಕರೆ ಕಂದಾಯ ಭೂಮಿ ನೀಡಲಾಗಿದೆ. ಆದರೆ ಹಳಿಂಗಳಿ ಗ್ರಾಮಸ್ಥರು ಅದು ಪ್ರಾಚೀನ ಇತಿಹಾಸವಿರುವ ಗುಂಫಾಗಳಿರುವ ಜಾಗೆಯಾಗಿದೆ. ಅದನ್ನು ಅವರಿಗೆ ಕೊಡಬೇಡಿ ಎಂದು ನ್ಯಾಯಾಲಯದ ತಡೆಯಾಜ್ಞೆಯನ್ನು ತಂದಿರುವುದರಿಂದ ಅದು ನೆನೆಗುದಿಗೆ ಬಿದ್ದಿದೆ. ಆದರೂ ಆದಷ್ಟು ಬೇಗನೆ ಆ ಸಮಸ್ಯೆಯನ್ನು ಕೂಡಾ ಪರಿಹರಿಸಲಾಗುವುದು. ನೀರಿನ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಬಾಧಿತವಾಗುವ ಗ್ರಾಮಗಳ ಜನತೆಗೆ ಊಟ, ವಸತಿ ಹಾಗೂ ಜಾನುವಾರುಗಳಿಗೆ ಮೇವು ವಿತರಿಸುವ ನಿಟ್ಟಿನಲ್ಲಿ ತಾಲೂಕು ಆಡಳಿತ ಕೆಲಸ ಮಾಡುತ್ತಿದೆ.
>
> । ಸಿದ್ದು ಸವದಿ, **ಶಾಸಕರು ತೇರದಾಳ ಮತಕ್ಷೇತ್ರ.**

**ಬೆಳೆ ಹಾನಿ :** ತಮದಡ್ಡಿ, ಹಳಿಂಗಳಿ (ಗುಳ್ಳಿಮನೆ), ಮದನಮಟ್ಟಿ, ಆಸಂಗಿ, ಅಸ್ಕಿ, ಕುಲಹಳ್ಳಿ ಹಾಗೂ ಹಿಪ್ಪರಗಿ ಗ್ರಾಮದ ಕೃಷ್ಣಾ ನದಿ ತೀರದ ಬಹುತೇಕ ರೈತರ ಜಮೀನಿಗೆ ನೀರು ನುಗ್ಗಿರುವುದರಿಂದ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ.

ಪ್ರವಾಹದ ಕುರಿತು ಜಾಗೃತಿ ಮೂಡಿಸಲು ಸರಕಾರದಿಂದ ಡಂಗುರಗಳನ್ನು ಸಾರಲಾಗುತ್ತಿದ್ದು , ಜೊತೆಗೆ ಆಯಾ ಗ್ರಾಮದ ವ್ಯಾಪ್ತಿಯಲ್ಲಿನ ಆರೋಗ್ಯಾಧಿಕಾರಿಗಳು ಹಾಗೂ ಪಶುವೈದ್ಯಾಧಿಕಾರಿಗಳು ತುರ್ತು ಚಿಕಿತ್ಸೆಗಾಗಿ ಬೀಡು ಬಿಟ್ಟಿದ್ದು, ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದಾರೆ.

ಮಹಾರಾಷ್ಟ್ರದ ಜಲಾನಯನ ಪ್ರದೇಶದ ಅಧಿಕಾರಿಗಳ ಜೊತೆ ಇಲ್ಲಿನ ಕೃಷ್ಣಾ ಮೇಲ್ದಂಡೆ ಯೋಜನೆ ಅಧಿಕಾರಿಗಳು ನಿರಂತರ ಸಂಪರ್ಕದಲ್ಲಿರುವುದರಿಂದ ಹಾಗೂ ಮಹಾರಾಷ್ಟ್ರದಿಂದ ಹರಿದು ಬರುವ ಕೃಷ್ಣಾ ನದಿಯ ನೀರನ್ನು ಇಲ್ಲಿನ ಹಿಪ್ಪರಗಿ ಜಲಾಶಯದಿಂದ ಹಾಗೂ ಆಲಮಟ್ಟಿ ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಮುಂದಕ್ಕೆ ಬಿಡುತ್ತಿರುವುದರಿಂದ ಪ್ರವಾಹ ಅಷ್ಟಾಗಿ ಬರಲಿಕ್ಕಿಲ್ಲ ಎಂಬುದು ಅಧಿಕಾರಿಗಳ ಅನಿಸಿಕೆ. ಆದರೂ ಸದ್ಯಕ್ಕೆ ಪ್ರವಾಹ ಭೀತಿ ಅಧಿಕವಾಗಿದ್ದು ಇನ್ನೂ ಇದೇ ಪ್ರಮಾಣದಲ್ಲಿ ನೀರು ಹರಿದುಬರುವ ಸಂಭವವಿರುವುದರಿಂದ ತಾಲ್ಲೂಕು ಆಡಳಿತ ಎಲ್ಲ ಗ್ರಾಮಗಳಲ್ಲಿ ಕಟ್ಟೆಚ್ಚರ ವಹಿಸಿದೆ. ಆದರೂ ಹಿಪ್ಪರಗಿ ಜಲಾಶಯದ ಹಿನ್ನೀರಿನಿಂದಾಗಿ ರೈತಾಪಿ ಜನತೆ ಸದಾ ಆತಂಕದಲ್ಲಿರುವುದಂತೂ ಸತ್ಯ.

## ತಂತ್ರಜ್ಞಾನ ಬೆಳವಣಿಗೆಗೆ ಬಿ.ಸಿ.ಎ ಕೋರ್ಸ್ ಅವಶ್ಯಕ: ಕುಂದಗೋಳ




**ಮಹಾಲಿಂಗಪುರ :** ಬಿ.ಸಿ.ಎ ಕೋರ್ಸ್ ಇಂದು ಎಲ್ಲ ಆಧುನಿಕ ತಂತ್ರಜ್ಞಾನಕ್ಕೆ ತಳಹದಿಯಾಗಿದೆ ಕೆ.ಎಲ್.ಇ ಡಿಪ್ಲೋಮಾ ಕಾಲೇಜಿನ ಪ್ರಾಚಾರ್ಯ ಎಸ್.ಆಯ್.ಕುಂದಗೋಳ ಹೇಳಿದರು.

ಪಟ್ಟಣದ ಕೆಎಲ್ಇ ಸಂಸ್ಥೆಯ ಎಸ್.ಸಿ.ಪಿ ಪದವಿ ಮಹಾವಿದ್ಯಾಲಯದಲ್ಲಿ ಬಿ.ಸಿ.ಎ ವಿಭಾಗದ ವತಿಯಿಂದ ಹಮ್ಮಿಕೊಂಡ ಐಟಿ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ತಂತ್ರಜ್ಞಾನ ಬೆಳವಣಿಗೆಗೆ ಅವಶ್ಯಕವಾದ ಕೋರ್ಸ್ ಇದಾಗಿದೆ.ವಿದ್ಯಾರ್ಥಿಗಳು ಇಂತಹ ಆಯೋಜಿತ ಸ್ಪರ್ಧೆಗಳಲ್ಲಿ ಭಾಗವಹಿಸಿ ಹೆಚ್ಚಿನ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ಕೆ.ಎಮ್. ಅವರಾದಿ ಅದ್ಯಕ್ಷತೆವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿವಿಧ ರೀತಿಯ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಹಲವಾರು ಕಾಲೇಜಿನ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದರು.

ಐಕ್ಯೂಎಸಿ ಸಂಯೋಜಕಿ ಡಾ.ಎಸ್.ಡಿ.ಸೊರಗಾಂವಿ ಬಿ.ಸಿ.ಎ ವಿಭಾಗ ಮುಖ್ಯಸ್ಥ ಎಸ್.ಆಯ್.ಪಾಟೀಲ, ಕಾರ್ಯಕ್ರಮ ಆಯೋಜಿತರಾದ ಎ.ಆರ್. ಉರಬಿ, ವಿನಾಯಕ ಬಡಿಗೇರ, ಶ್ರೀಮತಿ ಸುಮಾ.ಕೆ ಹಾಗೂ ಕಾಲೇಜಿನ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಇದ್ದರು.

# ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಏನು ಕೊಟ್ಟಿದೆ?

## ರಾಜ್ಯಕ್ಕೆ ಏನೂ ಕೊಡದೆ ಅನ್ಯಾಯವಾಗಿಲ್ಲ ಎಂದರೆ ಹೇಗೆ: ಸಿಎಂ ಸಿದ್ದರಾಮಯ್ಯ ಪ್ರಶ್ನೆ

**ಮೈಸೂರು :** ರಾಜ್ಯಕ್ಕೆ ಏನೂ ಕೊಡದೆ ಅನ್ಯಾಯವಾಗಿಲ್ಲ ಎಂದರೆ ಹೇಗೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು. ಮೈಸೂರಿನಲ್ಲಿ ಮಾಧ್ಯಮದವರೊಂದಿಗೆ ಅವರು ಇಂದು ಮಾತನಾಡಿದರು.

ಘೋಷಣೆ ಮಾಡಿದ್ದ ಅನುದಾನ ಕೊಟ್ಟಿಲ್ಲ ನಿರ್ಮಲಾ ಸೀತಾರಾಮನ್ ಅವರು ಪತ್ರಿಕಾಗೋಷ್ಠಿ ಕರೆದು ರಾಜ್ಯ-ಕ್ಕೆ ಅನ್ಯಾಯವಾಗಿಲ್ಲ ಎಂದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಬಜೆಟ್ ಮೀಟಿಂಗ್ ಕ-ರೆದಾಗಭದ್ರಾಮೇಲ್ದಂಡೆಯೋಜನೆಗೆ5300 ಕೋಟಿ ರೂಪಾಯಿಗಳನ್ನೂ ನೀಡುವುದಾಗಿ ಘೋಷಣೆ ಮಾಡಿದ್ದು, ಅದನ್ನು ಕೊಡಿ ಎಂದು ಕೋರಿದ್ದೆವು. ಈ ಬಾರಿಯ ಬಜೆಟ್ ನಲ್ಲಿ ಈ ಬಗ್ಗೆ ಪ್ರಸ್ತಾಪವಿಲ್ಲ. 15 ನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದ್ದ 5495 ಕೋಟಿಗಳ ವಿಶೇಷ ಅನುದಾನವನ್ನೂ ಕೊಟ್ಟಿಲ್ಲ. ಪೇರಿಫೇರಲ್ ರಿಂಗ್ ರೋಡ್ ಗೆ 3000ಕೋಟಿ ಕೊಡುವುದಾಗಿ ಹೇಳಿದ್ದರು. ಅದೂ ಇಲ್ಲ. 3000 ಕೋಟಿ ಕೆರೆಗಳ ಅಭಿವೃದ್ಧಿಗೆ ಕೊಡುವುದಾಗಿ ಹೇಳಿದ್ದರು. ಅದೂ ಕೂಡ ಬಜೆಟ್ ನಲ್ಲಿ ಇಲ್ಲ. ಇದು ಅನ್ಯಾಯವಲ್ಲವೇ..? ಆಂಧ್ರ, ಬಿಹಾರ ರಾಜ್ಯಗಳಿಗೆ ಕೊಟ್ಟಿದ್ದಾರೆ. ಕರ್ನಾಟಕಕ್ಕೆ ಏನು ಕೊಟ್ಟಿದ್ದಾರೆ ಎಂದು ಪ್ರಶ್ನಿಸಿದರು.

ನಿರ್ಮಲಾ ಸೀತಾರಾಮನ್ ಹಿಂದೆ-ಯೂ ಸುಳ್ಳು ಹೇಳಿದ್ದರು ಈಗಲೂ ಸುಳ್ಳು ಹೇಳಿದ್ದಾರೆ.

ಹೆಚ್.ಡಿ.ಕುಮಾರಸ್ವಾಮಿ ಮತ್ತು ನಿರ್ಮಲಾ ಸೀತಾರಾಮನ್ಅವರುಘೋಷಣೆಮಾಡಿದ ಅನುದಾನವನ್ನು ನಾವು ಕೊಡಿಸುತ್ತೇವೆ ಎಂದು ಪ್ರಸ್ತಾಪ ಮಾಡಬಹುದಿತ್ತು. ಕೇಂದ್ರ ಸಚಿವರ ಕ್ಷೇತ್ರ ರಾಮನಗರಕ್ಕೂ ಏನಾದರೂ ಹೊಸದು ಯೋಜನೆ ಬಂದಿದೆಯೇ? ಕೈಗಾರಿಕಾ ಕಾರಿಡಾರ್ ಬಂದಿದೆಯೇ? ಮೇಕೆದಾಟು, ಕೈಗಾರಿಕೆ ಹಾಗೂ ಕೇಳಿದ ಅನುದಾನ ಕೊಟ್ಟಿಲ್ಲ. ರಾಯಚೂರಿಗೆ ಏಮ್ಸ್ ಸ್ಥಾಪಿಸುವಂತೆ ಕೋರಿದ್ದೆವು. ಆದರೆ ಯಾವುದೇ ಪ್ರಸ್ತಾಪವಾಗಿಲ್ಲ. ಮೈಸೂರು ಅಥವಾ ಹಾಸನಕ್ಕೆ ಐ ಐ ಟಿ ಮಂಜೂರು ಮಾಡಲುಮನವಿಮಾಡಿದ್ದೆವುಅದೂಕೂಡ ಆಗಿಲ್ಲಹಾಗಾದರೆಅನ್ಯಾಯವಾಗಿಲ್ಲಎಂದ-ರೆ ಹೇಗೆ ಎಂದು ಪ್ರಶ್ನಿಸಿದರು. ನಿರ್ಮಲಾ ಸೀತಾರಾಮನ್ ಹಿಂದೆಯೂ ಸುಳ್ಳು ಹೇಳಿದ್ದರು ಈಗಲೂ ಸುಳ್ಳು ಹೇಳಿದ್ದಾರೆ ಎಂದರು.

ಕೇಂದ್ರದ ನೀತಿ , ಕಾರ್ಯಕ್ರಮಗಳಿಂದ ಶೇ 31% ದೇಶಕ್ಕೆ ಬರುತ್ತಿರುವ ಎಫ್.ಡಿ.ಐ ಕಡಿಮೆಯಾಗಿದೆ.

15ನೇಹಣಕಾಸುಯೋಜನೆಯಲ್ಲಿಅತಿಹೆಚ್ಚು ಅನ್ಯಾಯವಾಗಿರುವ ರಾಜ್ಯ ಕರ್ನಾಟಕ. ರಾಜ್ಯದಿಂದ ರಾಜ್ಯ ಸಭಾ ಸದಸ್ಯರಾಗಿರುವ ಅವರು ಕೈಗಾರಿಕೆಗಳೆಲ್ಲಾ ಬೇರೆ ರಾಜ್ಯಕ್ಕೆ ಹೋಗುತ್ತಿವೆ ಎಂದೂ ಹೇಳಿದ್ದಾರೆ. ಆದ-ರೆ ನಮ್ಮ ಕೇಂದ್ರ ಸರ್ಕಾರದ ಹಣಕಾಸು ಸಚಿವರ ನೀತಿ , ಕಾರ್ಯಕ್ರಮಗಳಿಂದ ಶೇ 31% ನಮ್ಮ ದೇಶಕ್ಕೆ ಬರುತ್ತಿರುವ ಎಫ್.ಡಿ.ಐ ಕಡಿಮೆಯಾಗಿದೆ. ಕೇಂದ್ರಕ್ಕೆತೆರಿಗೆನೀಡುವಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದು, ಕರ್ನಾಟಕ 2 ನೇ ಸ್ಥಾನದಲ್ಲಿದೆ ಇನ್ನೇನು ಕೊಡುಗೆಕೊಡಬೇಕು? ಎಂದು ಪ್ರಶ್ನಿಸಿದರು. ಅವರೇ 2023-24 ನೇ ಬಜೆಟ್ ನಲ್ಲಿ ಹೇಳಿದಂತೆ ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಣೆ ಮಾಡಿದ್ದ 5300 ಕೋಟಿಗಳನ್ನು ಕೊಟ್ಟಿಲ್ಲ. ಅವರಘೋಷಣೆನೋಡಿಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಬಜೆಟ್ ನಲ್ಲಿ ಪುನರುಚ್ಚರಿಸಿದ್ದರು ಎಂದರು. ಕೇಂದ್ರ ಸರ್ಕಾರ 15 ಲಕ್ಷ ಕೋಟಿ ಸಾಲ ಮಾಡಿದೆ.

ಕೇಂದ್ರದ ಧೋರಣೆಗೆ ನೀತಿ ಆಯೋಗದ ಸಭೆಯನ್ನು ನಾವು ಬಹಿಷ್ಕರಿಸಿದೆವು. ತಮಿಳುನಾಡು, ತೆಲಂಗಾಣ ಹಾಗೂ ಬಿಜೆಪಿ ವಿರುದ್ಧವಾಗಿರುವ ಅನೇಕ ರಾಜ್ಯಗಳು ಹೋಗಿಲ್ಲ. ಮಮತಾ ಬ್ಯಾನರ್ಜಿ ಅವರು ಸಭೆಗೆ ಹಾಜರಾಗಿ ಮಾತನಾಡಲು ಸಮಯ ನೀಡಿಲ್ಲ ಎಂದು ಸಭೆಯಿಂದ ಹೊರನಡೆದರು ಎಂದರು. ಇವರು ನಮಗೆ ಪಾಠ ಹೇಳಿಕೊಡುತ್ತಾರೆ. ಇವರ ತಪ್ಪುಗಳಿಗೆ ಇಂದು ದೇಶದಲ್ಲಿ ಹೂಡಿಕೆಯಾಗುತ್ತಿಲ್ಲ. ನಾವು ಸಾಲ ಹೆಚ್ಚು ಮಾಡಿದ್ದೇವೆ ಎನ್ನುತ್ತಾರೆ. ನಾವು ವಿತ್ತೀಯ ಹೊಣೆಗಾರಿಕೆ ಕಾಯ್ದೆಯಡಿ ಜಿಡಿಪಿಯ ಶೇ 25% ರೊಳಗೇ ಇದ್ದೇವೆ. ಅವರು ಸುಮಾರು 15 ಲಕ್ಷ ಕೋಟಿ ಸಾಲ ಮಾಡಿದ್ದಾರೆ ಎಂದರು.

ಕರ್ನಾಟಕ ಭ್ರಷ್ಟ ರಾಜ್ಯವಲ್ಲ ಕರ್ನಾಟಕದ ಸಂಸದರು ರಾಜ್ಯಕ್ಕೆ ಆಗಿರುವ ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡಬೇಕು. ಕರ್ನಾಟಕ ಭ್ರಷ್ಟ ರಾಜ್ಯ ಎಂದು ಅವರು ಮಸಿ ಬಳಿಯುತ್ತಿದ್ದಾರೆ. ಕರ್ನಾಟಕ ಭ್ರಷ್ಟ ರಾಜ್ಯವಲ್ಲ. ನಾವು ಅಧಿಕಾರಕ್ಕೆ ಬಂದರೆ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಿದ್ದೇವೆ. ನಮ್ಮ ಸರ್ಕಾರದಲ್ಲಿ ಭ್ರಷ್ಟಾಚಾರ ಕಡಿಮೆಯಾಗುತ್ತಿದೆ ಎಂದರು.

ಹೂಡಿಕೆ ಕುರಿತು ಸ್ಪಷ್ಟನೆ ಕರ್ನಾಟಕದಲ್ಲಿ ಕೈಗಾರಿಕೆಗಳು ಹೂಡಿಕೆ ಮಾಡಲು ಮುಂದಾಗುತ್ತಿಲ್ಲ ಎಂಬ ಕೇಂದ್ರ ಹಣಕಾಸು ಸಚಿವರ ಹೇಳಿಕೆಗೆ ಸಂಬಂಧಪಟ್ಟಂತೆ ಎಂ. ಬಿ.ಪಾಟೀಲ್ ಹಾಗೂ ಪ್ರಿಯಾಂಕ ಖರ್ಗೆಯವರಿಗೆ ಈ ಬಗ್ಗೆ ಮಾತನಾಡಲು ಸೂಚಿಸುವುದಾಗಿ ಹೇಳಿದರು.

ಬಿಜೆಪಿ ಪಾದಯಾತ್ರೆ: ರಾಜಕೀಯವಾಗಿ ವಿರೋಧಿಸುತ್ತೇವೆ

ಬೆಂಗಳೂರಿನಿಂದ ಮೈಸೂರಿಗೆ ಬಿಜೆಪಿ ವಾಲ್ಮೀಕಿ ಮತ್ತು ಮೂಡಾ ಹಗರಣದ ಬಗ್ಗೆ ಪ್ರತಿಭಟಿಸಿ ಪಾದಯಾತ್ರೆಹಮ್ಮಿಕೊಂಡಿರುವ ಬಗ್ಗೆಪ್ರತಿಕ್ರಿಯೆನೀಡಿಅವರುಮಾಡಲಿ.ನಾವೂ ಕೂಡ ರಾಜಕೀಯವಾಗಿ ವಿರೋಧಿಸುತ್ತೇವೆ. ವಾಲ್ಮೀಕಿ ಹಗರಣದಲ್ಲಿ ನಾವು 84.63 ಕೋಟಿ ಹಗರಣವಾಗಿದೆಎನ್ನುವುದುನಿಜ.ಎಸ್.ಐ.ಟಿ ರಚನೆಯಾಗಿದ್ದು ತನಿಖೆಯಾಗುತ್ತಿದೆ. ಅವರೂ ಕೂಡ ಸಿಬಿಐ, ಇಡಿ ಯಾವರೂ ತನಿಖೆ ಮಾಡುತ್ತಿದ್ದಾರೆ ಎಂದರು.

ಬಿಜೆಪಿ ಕಾಲದಲ್ಲಿ ಭ್ರಷ್ಟಾಚಾರ ನಡೆದಿಲ್ಲವೇ? ಉಪಮುಖ್ಯಮಂತ್ರಿಗಳು ಅಯೋಗ್ಯ ಅಧಿಕಾರಿಗಳು ಹೀಗೆ ಮಾಡಿದ್ದಾರೆ ಎಂದು ಹೇಳಿರುವ ಬಗ್ಗೆ ಬಿಜೆಪಿ ಅಯೋಗ್ಯ ಅಧಿಕಾರಿಗಳನ್ನುಸರ್ಕಾರಏಕೆಇಟ್ಟುಕೊಂಡಿ-ದೆ ಎಂದು ಹೇಳಿರುವ ಬಗ್ಗೆ ಮಾತನಾಡಿ ಅವರ ಕಾಲದಲ್ಲಿ ಭ್ರಷ್ಟಾಚಾರ ನಡೆದಿಲ್ಲವೇ? ಅದಕ್ಕಾಗಿಯೇ 21 ಹಗರಣಗಳನ್ನು ಪಟ್ಟಿ ಮಾಡಿ ಹೇಳಿದ್ದೇನೆ ಎಂದರು. ಕೆಲವು ತನಿಖೆಗಳು ನಡೆಯುತ್ತಿವೆ

ರಾಘವೇಂದ್ರಸಹಕಾರಿಬ್ಯಾಂಕ್ಪ್ರಕರಣವನ್ನು ಸಿಬಿಐ ಗೆ ವಹಿಸಲಾಗಿದೆ. ಇಂದಿನವರೆಗೂ ಸಿಬಿಐ ತನಿಖೆ ಪೂರ್ಣಗೊಳಿಸಿಲ್ಲ.ಅವರ ಅವಧಿಯಲ್ಲಿ ಒಂದೇ ಒಂದು ಪ್ರಕರಣವನ್ನು ಸಿಬಿಐ ಗೆ ಕೊಟ್ಟಿಲ್ಲ. 7-8 ಹಗರಣಗಳನ್ನು ಸಿಬಿಐ ಗೆ ವಹಿಸಲಾಗಿದೆ. ಇದೆ ಬಿಜೆಪಿ ನಾವು ಅಧಿಕಾರದಲ್ಲಿದ್ದಾಗ ಸಿಬಿಐ ಯ ಚೋರ್ ಬಚಾವ್ ಸಂಸ್ಥೆ ಎನ್ನುತ್ತಿದ್ದರು. ಈಗ ಸಿಬಿಐ ಗೆ ಮೇಲೆ ಇವರಿಗೇನು ಪ್ರೀತಿ ಎಂದರು. ಈ ಕುರಿತ ದಾಖಲೆಗಳನ್ನು ನಾನು ಕೊಡುತ್ತೇನೆ ಎಂದರು.

ನನ್ನ ಮೇಲೆ ಯಾವ ಕಪ್ಪು ಮಸಿಯೂ ಇಲ್ಲ ಮೂಡಾ ಪ್ರಕರಣದಲ್ಲಿ ನಿವೇಶನಗಳನ್ನು ಸಿಎಂ ಹಿಂದಿರುಗಿಸಿ ತನಿಖೆಗೆ ಅವಕಾಶ ಕೊಡಬೇಕೆಂದು ಬಿಜೆಪಿ ಹೇಳಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಮೂಡಾ ಪ್ರಕರಣದಲ್ಲಿ ನನ್ನ ಮೇಲೆಯಾವಕಪ್ಪುಮಸಿಯೂಇಲ್ಲ.ಈಬಗ್ಗೆ ನ್ಯಾಯಾಂಗ ಆಯೋಗ ರಚನೆಯಾಗಿದೆ. ಬಿಜೆಪಿ ಯಾವುದೇ ನ್ಯಾಯಾಂಗ ತನಿಖೆ ರಚಿಸಿತ್ತೆ ಎಂದು ಪ್ರಶ್ನಿಸಿದರು. ಕೋವಿಡ್ 19 ಸಂದರ್ಭದಲ್ಲಿ 3 ರಿಂದ 4 ಸಾವಿರ ಕೋಟಿ ರೂಪಾಯಿ ನುಂಗಿ ಹಾಕಿದ್ದಾರೆ. ನ್ಯಾಯಾಂಗ ತನಿಖೆ ಅಥವಾ ಸಿಬಿಐ ಗೆ ವಹಿಸಲು ಕೊಡಿ ಎಂಡು ಒತ್ತಾಯಿಸಿದೆ. ಆದರೆ ಅವರು ಕೊಡಲಿಲ್ಲ ಎಂದರು. ಯಾವುದೇ ತಪ್ಪಿಲ್ಲದಿದ್ದರೂ ಕೂಡ ಜನರ ಮನಸ್ಸಿನಲ್ಲಿ ಅನುಮಾನವಿರಬಾರದು ಎಂಬ ಕಾರಣಕ್ಕೆ ನ್ಯಾಯಾಂಗ ಆಯೋಗ ರಚಿಸಲಾಗಿದೆ ಎಂದರು. ಒಬ್ಬ ಸಚಿವರು, ಮುಖ್ಯಮಂತ್ರಿಯಾಗಿದ್ದವರು ಹೇಗೆ ಮಾತನಾಡಿದರೆ ಹೇಗೆ? ನಮಗೆ ನಮ್ಮ ಪೊಲೀಸರ ಮೇಲೆ ನಂಬಿಕೆ ಇದೆ ಎಂದರು. ಬಿಜೆಪಿಯವರು ಸುಳ್ಳುಹೇಳುವುದು ಹಾಗೂ ಬ್ಲಾಕ್ ಮೇಲ್ ಮಾಡುವುದರಲ್ಲಿನಿಸ್ಸೀಮರು. ತಮ್ಮ40ವರ್ಷಗಳರಾಜಕೀಯಜೀವನದಲ್ಲಿ ಇಲ್ಲದ ಆರೋಪ ಈಗ ಬಂದಿರುವುದಕ್ಕೆ ಬೇಸರವಾಗಿದೆಯೇಎಂಬಾಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ ನಾನು ತಪ್ಪು ಮಾಡಿದ್ದರೆ ನನಗೆ ಬೇಸರವಾಗುತ್ತದೆ. ನಾನು ತಪ್ಪು ಮಾಡಿಲ್ಲ ಎಂದರು. ಬಿಜೆಪಿ ಯವರು ಸುಳ್ಳು ಹೇಳುವುದರಲ್ಲಿ, ಬ್ಲಾಕ್ ಮೇಲ್ ಮಾಡುವುದರಲ್ಲಿ ನಿಸ್ಸೀಮರು. ಅವರಿಗೆ ಯಾವ ಸಿದ್ಧಾಂತವಿದೆ. ಸಾಮಾಜಿಕ ನ್ಯಾಯ, ಜಾತ್ಯಾತೀತತೆ, ಪ್ರಜಾಪ್ರಭುತ್ವ, ಸಂವಿಧಾನದ ವಿರುದ್ದವಾಗಿದ್ದಾರೆ ಎಂದರು.

ಮುದಾದಿಂದ ಎಷ್ಟು ನಿವೇಶನಗಳು ದೇವೇಗೌಡರ ಕುಟುಂಬಕ್ಕೆ ಹೋಗಿದೆ?

ಬಹಳ ಮಾತನಾಡುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಯವರು 1984 ರಲ್ಲಿ ಕೈಗಾರಿಕಾ ನಿವೇಶನವನ್ನು ಪಡೆದರು. ಸ್ವಾದೀನಕ್ಕೆ ಕೂಡ ಪಡೆದಿದ್ದಾರೆ. ನಂತರ ಬದಲಿನಿವೇಶನಕ್ಕೆಅರ್ಜಿಹಾಕಿಕೊಂಡಿದ್ದಾರೆ. ಕೈಗಾರಿಕೆ ಮಾಡಿದ್ದಾರೆಯೇ? ಎಂಡಿ ಕೇಳಿದರು. ಸಿ ಐ ಡಿಬಿ ಇರುವಾಗ

ಪುಟ್ಟಯ್ಯ ಇರುವಾಗ ಎಷ್ಟು ನಿವೇಶನಗಳು ದೇವೇಗೌಡರ ಕುಟುಂಬಕ್ಕೆ ಹೋಗಿದೆ? ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು.

ದೆಹಲಿ ಪ್ರವಾಸ ಸರ್ಕಾರ ಹಾಗೂ ಪಕ್ಷದ ಬಗ್ಗೆ ಚರ್ಚೆ ಮಾಡಲು ವರಿಷ್ಠರು ಕರೆದಿದ್ದಾರೆ .ಹಾಗಾಗಿ ನಾನೂ ಮತ್ತು ಉಪಮುಖ್ಯಮಂತ್ರಿಗಳು ದೆಹಲಿಗೆ ಭೇಟಿ ನೀಡುತ್ತಿದ್ದೇವೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಮೇಕೆದಾಟು ಯೋಜನೆ ಬಗ್ಗೆ ಚರ್ಚೆಗೆ ಸಿದ್ಧ ಮೆಟ್ಟೂರು ಅಣೆಕಟ್ಟು ತುಂಬಿ ನೀರು ವ್ಯರ್ಥವಾಗುತ್ತಿದ್ದು, ಈ ಬಗ್ಗೆ ತಮಿಳುನಾಡು ಸರ್ಕಾರದೊಂದಿಗೆ ನಾವು ಮಾತನಾಡಲು ತಯಾರಿದ್ದೇವೆ. ಮೇಕೆದಾಟು ಯೋಜನೆಯಿಂದ ಅವರಿಗೆ ತೊಂದರೆಯಾಗದಿದ್ದರೂ ಮಾತನಾಡಲು ಅವರು ಸಿದ್ದರಿಲ್ಲ.ಕೇಂದ್ರ ಸರ್ಕಾರ ಅನುಮೋದನೆ ಕೊಟ್ಟರೇ ನಾವು ನಿರ್ಮಾಣ ಮಾಡಲು ಸಿದ್ಧ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಬಾಂಗ್ಲಾದೇಶದಿಂದ 20 ಸಾವಿರ ಜನ ಬೆಂಗಳೂರಿಗೆ ವಲಸೆ ಬಂದಿರುವ ಬಗ್ಗೆ ಮಾತನಾಡಿ ಈ ಬಗ್ಗೆ ತಿಳಿದಿಲ್ಲ. ವಿಚಾರ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದರು.

# ಶಾಲಾ ಸಂಸತ್ ಉದ್ಘಾಟನೆ







**ಇಲಕಲ್ಲ :** ಶ್ರೀ ವಿಜಯ ಮಹಾಂತೇಶ ಕನ್ನಡ ಮಾಧ್ಯಮ ಪ್ರಾಥಮಿಕ ಮತ್ತು ಕನ್ನಡ ಹಾಗೂ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ 2024-25 ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಸಂಸತ್ ಉದ್ಘಾಟನೆ ವಿಜೃಂಭಣೆಯಿಂದ ಜರುಗಿತು.

ಸಂಸ್ಥೆಯ ಘನ ಅಧ್ಯಕ್ಷರಾದ ಶ್ರೀ ಮ.ನಿ.ಪ್ರ ಗುರುಮಹಾಂತ ಸ್ವಾಮಿಗಳವರು ಶಾಲಾ ಸಂಸತ್ತನ್ನು ಉದ್ಘಾಟನೆ ಮಾಡಿ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿ, ಮಕ್ಕಳನ್ನು ಕುರಿತು ಈ ಶಾಲೆಯಲ್ಲಿ ಕಲಿಯುತ್ತಿರುವ ನೀವೆಲ್ಲರೂ ಭಾಗ್ಯವಂತರು, ವಿದ್ಯಾರ್ಥಿಗಳು ಶಾಲೆಯಲ್ಲಿದ್ದಾಗಲೇ ದೇಶದ ಸಂವಿಧಾನದ ನಿಯಮಗಳನ್ನು ಸರಿಯಾಗಿ ತಿಳಿದುಕೊಂಡು ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ಹೇಳಿದರು. ಮತ್ತು ಬಸವದೇವರು ಉಪಸ್ಥಿತರಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ ಜಿ. ವ್ಹಿ. ಮರಟದ ವಹಿಸಿದ್ದರು. ಅವರು ಶಾಲಾ ಸಂಸತ್ತಿನ ನಿಯಮಗಳನ್ನು ತಿಳಿಸುತ್ತಾ ಮಕ್ಕಳು ವಿಜ್ಞಾನ, ಕ್ರೀಡೆ, ಕಲೆ, ಸಾಹಿತ್ಯ,

ವೈಚಾರಿಕತೆ ಮೈಗೂಡಿಸಿಕೊಂಡಾಗ ತಮ್ಮ ಬದುಕು ಉಜ್ವಲವಾಗುವುದೆಂದು ಹೇಳಿದರು. ಈ ಸಂಸ್ಥೆಯ ಶೈಕ್ಷಣಿಕ ಬೆಳವಣಿಗೆಯಲ್ಲಿ ಪೂಜ್ಯ ಡಾ. ಮಹಾಂತಪ್ಪಗಳವರ ಶ್ರೀರಕ್ಷೆ ಅಪಾರವಾಗಿದ್ದು, ಇದೇ ರೀತಿ ಸಂಸ್ಥೆಯ ಮೇಲೆ ಪೂಜ್ಯ ಗುರು ಮಹಾಂತಪ್ಪಗಳವರ ಮಾರ್ಗದರ್ಶನ ಮತ್ತು ಕೃಪಾಶೀರ್ವಾದ ಇರಲೆಂದು ಆಶಿಸುತ್ತೇವೆ ಎಂದು ನುಡಿದರು.

ತೋಟಗಾರಿಕೆ ಮಂತ್ರಿಗಳಾದ ಪ್ರೀತಮ್ ಜಾಲಿಹಾಳ, ಶರತ್ ದಿಡ್ಡಿ ಹಾಗೂ ಶಶಿಧರ ಗೋಗಿ ಇವರು ಮುಖ್ಯ ಅತಿಥಿಗಳಿಂದ ಸಸಿಗಳನ್ನು ಪಡೆದು ಶಾಲಾ ಆವರಣದಲ್ಲಿ ನೆಡಲಾಯಿತು. ಕುಮಾರಿ ಲತಾ ಹಿರೇಗೌಡರ ಹಾಗೂ ಸಂಗಡಿಗರು ವಚನ ನೃತ್ಯ ಮಾಡಿದರು, ಪ್ರೌಢ ವಿಭಾಗದ ಶಾಲಾ ಸಂಸತ್ತಿಗೆ ಆಯ್ಕೆಯಾದ ಕುಮಾರಿ ಶ್ರೇಯಾ ಸಿಂಗ್ ಹಾಗೂ ಕುಮಾರ ಭುವನ್ ರಾಂಪೂರ ಇವರು ಶಾಲೆಯ ಅಭಿವೃದ್ಧಿಗಾಗಿ ನಾವು ಶ್ರಮ ವಹಿಸಿ ಕಾರ್ಯ ನಿರ್ವಹಿಸುತ್ತೇವೆಂದು ಹೇಳಿದರು.

ವೇದಿಕೆಯ ಮೇಲೆ ನಮ್ಮ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎಸ್. ಆರ್. ಕಂಪ್ಲಿ, ಶ್ರೀ ಬಿ. ವ್ಹಿ. ಮರಟದ, ಎಮ್. ಎಸ್. ವಾಲಿ, ಎಮ್. ಸಿ. ಹರಿಹರ, ಎನ್. ಎಲ್. ಕನ್ನೂರ, ಜಿ. ವಿ. ನಾಲವಾಡದ, ಶ್ರೀ ಎ. ಎಸ್. ಬುದ್ದಿನ್ನಿ, ಮುಖ್ಯ ಗುರುಮಾತೆಯವರಾದ ಶ್ರೀಮತಿ ಎ. ಎಸ್. ಮಠದ, ಶ್ರೀ ಎ. ಎಸ್. ಅಂಗಡಿ ಹಾಗೂ ಶ್ರೀ ಕುಮಾರ ಹಿರೇಮಠ, ಶ್ರೀ ರೂಪಲೇಖ ಗೌಡರ ಉಪಸ್ಥಿತರಿದ್ದರು.

ಶಿವಾನಿ ಕಠಾರೆ ಕಾಟವಾ ಹಾಗೂ ತನುಶ್ರೀ ಕಠಾ-ರೆ ವಚನ ಪ್ರಾರ್ಥನೆ ಮಾಡಿದರು, ಶಾಂಭವಿ ಮೇಟಿಮಠ, ದಿವ್ಯಾಶ್ರೀ ಗೌಡರ ಹಾಗೂ ಆರುಷ್ ಪಾಟೀಲ್ ಸ್ವಾಗತಿಸಿದರು, ಕುಮಾರಿ ಸಪ್ತಮಿ ಕುಂಬಾರ ವಂದನಾರ್ಪಣೆ ಮಾಡಿದಳು, ಕುಮಾರಿ ರಾಧಿಕಾ ಕೊಂಗತಿ ಹಾಗೂ ದಿಯಾ ಚವ್ಹಾಣ ಕಾರ್ಯಕ್ರಮ ನಿರೂಪಿಸಿದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State